**ಸಾರ್ವಜನಿಕ ಪ್ರಯಾಣಿಕರಿಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಂಪೂರ್ಣ ಹೊಣೆಗಾರಿಕೆ**

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
# ಕೇಂದ್ರ ಕಛೇರಿ, ಬೆಂಗಳೂರು-560 027.

## ಖನಾಗರೀಕರ ಸನ್ನದುಖ

ಈ ನಾಗರೀಕರ ಸನ್ನದು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸಾರ್ವಜನಿಕ ಪ್ರಯಾಣಿಕರ ಹೊಣೆಗಾರಿಕೆಯಾಗಿ ಹಾಕಿಕೊಂಡಿರುವ ಮುಖ್ಯ ಧ್ಯೇಯೊದ್ದೇಶ ಕಾರ್ಯಕ್ರಮಗಳ ಪರಿಚಯ ನೀಡುತ್ತದೆ. ಈ ಸಂಸ್ಥೆಯು ಬೆಂಗಳೂರು ನಗರ ಹಾಗೂ ಸುತ್ತುಮುತ್ತಲಿನ ಪ್ರದೇಶಗಳ ಸಾರ್ವಜನಿಕರಿಗೆ ಪ್ರಯಾಣ ಸೌಕರ್ಯ ಒದಗಿಸುವ ಏಕೈಕ ಸಾರಿಗೆ ಸಂಸ್ಥೆಯಾಗಿರುತ್ತದೆ.

ಈ ಸನ್ನದು ಸಂಸ್ಥೆಯ ಮೂಲ ಉದ್ದೇಶ, ನಿಯಂತ್ರಣ, ಕಾರ್ಯವೈಖರಿ ಮತ್ತು ಜನ ಸಾಮಾನ್ಯರಿಗೆ ಅನುಕೂಲವಾಗುವಂತೆ ಹಮ್ಮಿಕೊಂಡಿರುವ ಸೇವೆಗಳು ಮತ್ತು ಸೌಲಭ್ಯಗಳ ವಿವರಗಳನ್ನೊಳಗೊಂಡಿದೆ. ಸಂಸ್ಥೆಯು ಸಾರ್ವಜನಿಕರಿಗೆ ನೂತನವಾಗಿ ಒದಗಿಸಲಾಗಿರುವ ಸೇವೆಗಳ ಪರಿಚಯವನ್ನು ಸನ್ನದಿನಲ್ಲಿ ಪ್ರತಿವರ್ಷವು ಸೇರಿಸಲಾಗುತ್ತಿದೆ.

ಬೆಂಮಸಾಸಂಸ್ಥೆಯ ನಾಗರೀಕರ ಸನ್ನದ್ದನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ.

ಅ. ಮೊದಲಿಗೆ ಸಂಸ್ಥೆಯ ಧ್ಯೇಯ, ಗುರಿ, ಸೇವೆಯ ವಿವರಗಳು, ಸಾರ್ವಜನಿಕರಿಗೆ ಒದಗಿಸಲಾಗಿರುವ ಸೌಲಭ್ಯಗಳನ್ನು ಒಳಗೊಂಡಿರುತ್ತದೆ.

ಆ. ಎರಡನೆಯದಾಗಿ ಸಾರ್ವಜನಿಕರಿಗೆ ನೀಡಿರುವ ಭರವಸೆ, ಸಾರ್ವಜನಿಕರ ಕುಂದುಕೊರತೆ ನಿವಾರಣೆ ಕ್ರಮ, ಸಾರ್ವಜನಿಕರೊಡನೆ ಸ್ಪಂದಿಸುವುದು ಇತ್ಯಾದಿ

ಇ. ಮೂರನೆಯದಾಗಿ ಅನುಬಂಧಗಳ ವಿವರಗಳು.

**ಅಧ್ಯಾಯಗಳು:**

**ಅ.**

1. ಸಂಸ್ಥೆಯ ಪರಿಚಯ ಹಾಗೂ ಧ್ಯೇಯೊದ್ದೇಶಗಳು
2. ಸಂಕ್ಷಿಪ್ತ ವಿವರ
3. ಸಂಸ್ಥೆಯ ವಾಹನ ಬಲ
4. ಸೇವೆಯ ವಿವರಗಳು
5. ಪ್ರಯಾಣಿಕರ ಸೌಲಭ್ಯಗಳು
6. ಸಾರ್ವಜನಿಕ ಪಾಸು ವ್ಯವಸ್ಥೆ ಹಾಗೂ ಹೆಚ್ಚುವರಿ ಸೌಲಭ್ಯ ನೀಡಿರುವ ಬಗ್ಗೆ.

**ಆ.**

1. ಸಾಮಾಜಿಕ ಹೊಣೆಗಾರಿಕೆಗಳು & ಪ್ರಯಾಣಿಕ ಸ್ನೇಹಿ ಕಾರ್ಯಕ್ರಮಗಳು
2. ಸಂಸ್ಥೆಯ ಆಶ್ರಯದಾತರಿಗೆ ಹಾಗೂ ಸಾರ್ವಜನಿಕರಿಗೆ ವಚನಬದ್ಧ ◌ೋಷಣೆ
3. ಸಂಸ್ಥೆಗೆ ಕಾರ್ಯಪ್ರವರ್ತನೆಗೆ ಬೆಂಬಲ ಸೂಚಿಸುವ ದಾರಿ
4. ಪ್ರಯಾಣಿಕರ ಸ್ನೇಹಿ ಆವಿಷ್ಕಾರಗಳು
5. ಇತರೆ

**ಅನುಬಂಧಗಳು**

C. ಬೆಂಮಸಾಸಂಸ್ಥೆ ಸಂಪರ್ಕಿಸಲು ದೂರವಾಣಿ ಸಂಖ್ಯೆಗಳು

D. ವಿದ್ಯಾರ್ಥಿಯಾಯ್ತಿ ಪಾಸು ಪಡೆಯಲು ಅರ್ಜಿ ನಮೂನೆ

E. ಮಾಸಿಕ ಪಾಸು ಪಡೆಯಲು ಅರ್ಜಿ ನಮೂನೆ

F. ಸಾಂಧರ್ಭಿಕ ಒಪ್ಪಂದದ ಸೇವೆ ಪಡೆಯಲು ಅರ್ಜಿ ನಮೂನೆ

G. ಹೊಸ ಮಾರ್ಗಗಳ ಬೇಡಿಕೆ ಬಗ್ಗೆ ಅರ್ಜಿ ನಮೂನೆ

H. ಸಂಸ್ಥೆಯ ಸೇವೆಗಳ ಬಗ್ಗೆ ಮಾಹಿತಿ ಪಡೆಯಲು ಅಧಿಕಾರಿಗಳ ವಿವರ

I. ಆಚರಣೆಯಲ್ಲಿರುವ ಮಾರ್ಗಗಳ ಬಗ್ಗೆ ದೂರು ನೀಡುವ ನಮೂನೆ

J. ದೂರು & ಸಲಹೆಗಳಿಗಾಗಿ ಅರ್ಜಿ ನಮೂನೆ

K. ಗುತ್ತಿಗೆ ಸೇವೆಗಳ ಮಾಹಿತಿ

L. ಸಾಂದರ್ಭಿಕ ಒಪ್ಪಂದ ಸೇವೆಗಳು

## 1. ಮುನ್ನುಡಿ ಹಾಗೂ ಸಂಸ್ಥೆಯ ಧ್ಯೇಯೋದ್ದೇಶಗಳು:

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಈ ಹಿಂದಿನ ಬೆಂಗಳೂರು ನಗರ ಸಾರಿಗೆ ಸಂಸ್ಥೆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಬೇರ್ಪಟ್ಟು ದಿನಾಂಕ 15/08/1997 ರಂದು ಸ್ವತಂತ್ರ ಸಂಸ್ಥೆಯಾಗಿ ಅಸ್ಥಿತ್ವಕ್ಕೆ ಬಂದಿರುತ್ತದೆ. ಸಂಸ್ಥೆಯ ಆಚರಣಾ ವ್ಯಾಪ್ತಿಯು ಮೊದಲು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 20 ಕಿ.ಮೀ ವರೆಗೆ ಇದ್ದು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಿಂದ 25 ಕಿ.ಮೀ ವರೆಗೆ ಇದರ ವ್ಯಾಪ್ತಿಯು ವಿಸ್ತರಿಸಿದೆ.**

ಬೆಂಗಳೂರು ನಗರ ಮತ್ತು ಹೊರವಲಯ ಪ್ರದೇಶ ಎಲ್ಲಾ ವರ್ಗದ ಪ್ರಯಾಣಿಕರಿಗೆ ದಕ್ಷ, ಸಮರ್ಥ, ಸುರಕ್ಷಿತ, ವಿಶ್ವಾಸಾರ್ಹ ಮತ್ತು ನಿಗದಿತ ಸಾರಿಗೆ ಸೇವೆಯನ್ನು ಒದಗಿಸುವುದು ಸಂಸ್ಥೆಯ ಧ್ಯೇಯವಾಗಿರುತ್ತದೆ.

## 2. ಸಂಕ್ಷಿಪ್ತ ವಿವರ :

ಭಾರತ ದೇಶದಲ್ಲಿ ಬೆಂಗಳೂರು ನಗರವು ಶೀ್ರ ಗತಿಯಲ್ಲಿ ಬೆಳವಣಿಗೆ ಹೊಂದುತ್ತಿರುವ ನಗರಗಳಲ್ಲಿ 5ನೇ ದೊಡ್ಡ ನಗರವಾಗಿರುತ್ತದೆ. ಈ ದಿನ ಬೃಹತ್ ಬೆಂಗಳೂರು ಸುಮಾರು 824 ಚದರ ಕಿ.ಮೀಗಳ ವಿಸ್ತೀರ್ಣವನ್ನು ಹೊಂದಿದ್ದು ಮುಂಬರುವ 20 ವರ್ಷಗಳಲ್ಲಿ 15 ಮಿಲಿಯನ್ ಜನಸಂಖ್ಯೆಯನ್ನು ಹೊಂದಲಿದೆಯಂದು ಅಂದಾಜಿಸಲಾಗಿರುತ್ತದೆ ಹಾಗೂ ಉತ್ತಮ ಬಸ್ ಸೇವೆಗಾಗಿ ಪ್ರಸಿದ್ದಿಯನ್ನು ಪಡೆದಿರುತ್ತದೆ.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಾಗಿ (ಬಿಎಂಟಿಸಿ) 1997 ರಲ್ಲಿ ಸ್ವತಂತ್ರ ಸಾರಿಗೆ ಸಂಸ್ಥೆಯಾಗಿ ರಚನೆಗೊಂಡಿದ್ದು ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ಹೊರವಲಯ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಒದಗಿಸುವ ಏಕೈಕ ಗುರಿ ಹೊಂದಿರುತ್ತದೆ. 1940 ರಲ್ಲಿ ಬಿಟಿಸಿ (ಬೆಂಗಳೂರು ಟ್ರಾನ್ಸ್ಪೋರ್ಟ್ ಕಂಪನಿ) ಹೆಸರಿನಿಂದ ತನ್ನ ಆಚರಣೆಯನ್ನು ಪ್ರಾರಂಭಿಸಿರುತ್ತದೆ.**

ನಂತರ ಅಂದರೆ 1957 ರಲ್ಲಿ ಬೆಂಗಳೂರು ಟ್ರಾನ್ಸ್ಪೋರ್ಟ್ ಸೇವೆ (ಬಿಟಿಎಸ್) ಎಂದು ಮತ್ತು 1961 ರಲ್ಲಿ ಮೈಸೂರು ರಾಜ್ಯ ರಸ್ತೆ ಸಾರಿಗೆ ನಿಗಮದಡಿಯಲ್ಲಿ ಬಿಟಿಎಸ್ ಹೆಸರಿನಡಿಯಲ್ಲಿ ತನ್ನ ಕಾರ್ಯನಿರ್ವಹಿಸಿರುತ್ತದೆ.

ಬೆಂಗಳೂರು ಮಹಾನಗರದ ಜನತೆಗೆ ವಿಶ್ವದರ್ಜೆಯ ಸಾರಿಗೆ ಸೌಲಭ್ಯವನ್ನು ಒದಗಿಸುವ ಗುರಿಯೊಂದಿಗೆ ಸಂಸ್ಥೆಯು ರೂಪುಗೊಂಡಿರುತ್ತದೆ. ನಗರದ ಬೆಳವಣಿಗೆ, ಕಾರ್ಖಾನೆಗಳ ಪ್ರಸರಣಕ್ಕನುಗುಣವಾಗಿ ದಿನ ನಿತ್ಯ ಪ್ರಯಾಣಿಕರು ಹೆಚ್ಚಾಗಿದ್ದು ಅದಕ್ಕೆ ಪೂರಕವಾಗಿ ಬೆಂಮಸಾಸಂಸ್ಥೆಯು ತನ್ನ ಆಚರಣೆಯನ್ನು ವಿಸ್ತರಿಸಿರುತ್ತದೆ.

ಬೆಂಗಳೂರು ನಗರದಲ್ಲಿ ಸುಮಾರು 4.8 ಮಿಲಿಯನ್ ಪ್ರಯಾಣಿಕರಿಗೆ ಪ್ರಯಾಣ ಸೌಲಭ್ಯ ಒದಗಿಸುತ್ತಿರುವ ಬಸ್ ನಿಗಮವಾಗಿ ಮುಂಚೂಣಿಯಲ್ಲಿರುತ್ತದೆ. 6400+ ಬಸ್ಸುಗಳ ವಾಹನ ಬಲದೊಂದಿಗೆ ನಗರದ ಮಧ್ಯಭಾಗದಿಂದ 40.4 ಕಿಮೀ ಸುತ್ತಳತೆಯಲ್ಲಿ ಆಚರಣೆಯಲ್ಲಿರುತ್ತದೆ. ಪ್ರತಿ ದಿನ ಬೆಂಮಸಾಸಂಸ್ಥೆ 502 ನಗರ ಹಾಗೂ 1887 ನಗರ ಹೊರವಲಯ ಮಾರ್ಗಗಳನ್ನು ಆಚರಣೆಗೊಳಿಸುತ್ತಾ 14.31 ಲಕ್ಷ ಕಿ.ಮೀಗಳನ್ನು ಕ್ರಮಿಸುತ್ತಾ 82,818 ಸುತ್ತುವಳಿಗಳನ್ನು ಪೂರೈಸುತ್ತಿರುತ್ತದೆ.

2010 ನೇ ಸಾಲಿನಲ್ಲಿ ಬೆಂಮಸಾಸಂಸ್ಥೆಯ ಆಚರಣಾ ವ್ಯವಸ್ಥೆ ಎರಡು ಸ್ಥರದ ವ್ಯವಸ್ಥೆಯಿಂದ ಮೂರು ಸ್ಥರದ ವ್ಯವಸ್ಥೆಯಾಗಿ ಮಾರ್ಪಾಡುಗೊಂಡಿರುತ್ತದೆ. ಈ ವ್ಯವಸ್ಥೆಯಡಿಯಲ್ಲಿ ಆಚರಣಾ ವ್ಯಾಪ್ತಿಯನ್ವಯ 5 ವಿಭಾಗಗಳಾಗಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಹಾಗೂ ವೋಲ್ವೋ ವಿಭಾಗಗಳಾಗಿ ವಿಂಗಡೆಯಾಗಿರುತ್ತದೆ.

ಈ ವಿಭಾಗಗಳು ಸಂಸ್ಥೆಯ ಇತರ ಸಹೋದರಿ ಸಂಸ್ಥೆಗಳಾದ ಕರಾರಸಾನಿಗಮ, ವಾಕರಾರಸಾನಿಗಮ & ಈಕರಾರಸಾನಿಗಮದ ಮಾದರಿಯಲ್ಲಿ ರಚನೆಯಾಗಿರುತ್ತದೆ. ಪ್ರತಿ ವಿಭಾಗಕ್ಕೆ ದರ್ಜೆ-1ರ ಹಿರಿಯ ಅಧಿಕಾರಿ ವಿಭಾಗೀಯ ನಿಯಂತ್ರಣಾಧಿಕಾರಿಯವರು ಮುಖ್ಯಸ್ಥರಾಗಿರುತ್ತಾರೆ.

**ಅ. ಸಂಸ್ಥೆಯ ಸಂಪನ್ಮೂಲಗಳು :**

| | |
|---|---|
| ಬೆಂಮಸಾಸಂಸ್ಥೆಯ ಆಡಳಿತ ಕಛೇರಿ | ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು-560 027 |
| ಪ್ರಮುಖ ಕಾರ್ಯಗಾರಗಳು ** | 2 |
| ಬಸ್ ಟಕಗಳು | 39 |
| ಪ್ರಮುಖ ಬಸ್ ನಿಲ್ದಾಣಗಳು | 3 |
| ಸಣ್ಣ ಬಸ್ ನಿಲ್ದಾಣಗಳು | 34 |
| ಟಿಟಿಎಂಸಿಗಳು | 10 |
| ಸಿಬ್ಬಂದಿ ತರಬೇತಿ ಕೇಂದ್ರಗಳು | 2 |

## 1. <u>ವಾಹನ ಬಲ :</u>

ಬೆಂಮಸಾಸಂಸ್ಥೆಯು ಬಲಿಷ್ಟ 6441 ಬಸ್ಸುಗಳ ವಾಹನ ಬಲವನ್ನು ಹೊಂದಿದ್ದು ವಿವಿಧ ವರ್ಗದ ಪ್ರಯಾಣಿಕರ ಪ್ರಯಾಣ ಸೌಲಭ್ಯಕ್ಕೆ ತಕ್ಕಂತೆ ವಿವಿಧ ದರ್ಜೆಯ ಬಸ್ಸುಗಳನ್ನು ಆಚರಣೆ ಗೊಳಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ತಯಾರಿಕಾ-ಮಾದರಿಯ ಬಸ್ಸುಗಳ ವಿಂಗಡಣೆ ಕೆಳಕಂಡಂತಿವೆ:

| | |
|---|---|
| ಲೈಲ್ಯಾಂಡ್ | 2935 |
| ಟಾ | 2402 |
| ಇಯಚರ್ | 401 |
| ಸ್ವರಾಜ್ ಮಜ್ದಾ(ಮಿನಿ) | 111 |

| | |
|---|---|
| ವೋಲ್ವೋ (ಪ್ರೀಮೀಯಂ ಹವಾನಿಯಂತ್ರಣ) | 567 |
| ಮಾರ್ಕೋಪೋಲೋ (ಹವಾ ನಿಯಂತ್ರಣ) | 25 |
| **ಒಟ್ಟು** | **6441** |

## 2. ಸೇವೆಯ ವರ್ಗ:

ಬೆಂಮಸಾಸಂಸ್ಥೆಯು ವಿವಿಧ ವರ್ಗದ ಸೇವೆಗಳೊಂದಿಗೆ ಸಮಾಜದ ವಿವಿಧ ವರ್ಗದ ಜನರ ಪ್ರಯಾಣ ಬೇಡಿಕೆಗನುಗುಣವಾಗಿ ಮಿಶ್ರ ರೂಪದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಒದಗಿಸುತ್ತಿರುತ್ತದೆ. ಅವುಗಳು ಈ ಕೆಳಕಂಡ ವರ್ಗದಲ್ಲಿ ವಿಂಗಡಣೆಯಾಗಿರುತ್ತದೆ.

| | |
|---|---|
| ತಲುಪುವ ಮಾರ್ಗವಾರು ವಿಂಗಡಣೆ | ನಗರ (ಕಪ್ಪು ಹಲಗೆ), ನಗರ ಹೊರವಲಯ (ಕೆಂಪು ಹಲಗೆ), ಗ್ರಾಮಾಂತರ (ಕೆಎಸ್ಆರ್ಟಿಸಿ ದರ) |
| ಗುಣಮಟ್ಟವಾರು ವಿಂಗಡಣೆ | **ಸಾಮಾನ್ಯ : ಪರಿಸರವಾಹಿನಿ, ಪುಷ್ಪಕ್, ಸುವರ್ಣ (ಹವಾನಿಯಂತ್ರಣರಹಿತ)**<br>**ಹವಾನಿಯಂತ್ರಣ : ಎ.ಸಿ.ಸುವರ್ಣ**<br>**ಹವಾನಿಯಂತ್ರಣ ಪ್ರೀಮಿಯಂ : ವಜ್ರ ಹಾಗೂ ವಾಯುವಜ್ರ ಮೀಸಲು ಸೇವೆ** |
| ದರ್ಜೆವಾರು ವಿಂಗಡಣೆ | ಪುಷ್ಪಕ್, ಸುವರ್ಣ, ಬಿಗ್-10, ಅಟಲ್ ಸಾರಿಗೆ, ಎಸಿ ಸುವರ್ಣ, ವಜ್ರ, ವಾಯುವಜ್ರ, ಬಿಗ್-ಕನೆಕ್ಟ್, ಮೆಟ್ರೋ ಫೀಡರ್ ಸೇವೆಗಳು |

**ಸೇವೆಯ ವ್ಯಾಖ್ಯಾನ :**

**1. ಸಾಮಾನ್ಯ ಸೇವೆಗಳು : ಸಾಮಾನ್ಯ ಹಾಗೂ ಪರಿಸರವಾಹಿನಿ ಬಸ್ಸುಗಳ ನಿಯೋಜನೆಯೊಂದಿಗೆ ಆಚರಣೆಗೊಳಿಸಲಾಗುತ್ತದೆ,**

ಸಾಮಾನ್ಯ ಪ್ರಯಾಣ ದರದೊಂದಿಗೆ ಆಚರಣೆಗೊಳಿಸಲಾಗುತ್ತದೆ. ಪ್ರಸ್ತುತ 4752 ಸಾಮಾನ್ಯ ಸೇವೆಗಳನ್ನು ನಗರ ಹಾಗೂ ಹೊರವಲಯಗಳಲ್ಲಿ ಆಚರಣೆಯಲ್ಲಿರುತ್ತವೆ. ಇವು ಬೆಂಮಸಾಸಂಸ್ಥೆಯ ಸೇವೆಗಳ ಪ್ರಮುಖ ಶಕ್ತಿಯಾಗಿರುತ್ತವೆ. ಗ್ರಾಮಾಂತರ ಸೇವೆಗಳು ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಿಂದಾಚೆಗಿನ ಗ್ರಾಮಗಳಿಗೆ ಸಾರಿಗೆ ಸಂಪರ್ಕವಿಲ್ಲದ ಹಳ್ಳಿಗಳಿಗೆ ಆಚರಣೆಗೊಳಿಸಲಾಗುತ್ತಿದೆ. ಇವುಗಳು ಕರಾರಸಾನಿಗಮದ ದರಗಳಲ್ಲಿ ಅಚರಣೆಗೊಳಿಸಲಾಗುತ್ತದೆ. ಒಟ್ಟಾರೆ ಆಚರಣೆಯಲ್ಲಿ ಒಂದು ಸಣ್ಣ ಭಾಗ ಮಾತ್ರವಾಗಿರುತ್ತವೆ.

**2. ಪುಷ್ಪಕ್ ಸೇವೆಗಳು : ಈ ಸೇವೆಗಳನ್ನು ಬಿಸ್ಕೆಟ್ ಬಣ್ಣದ ಬಸ್ಸುಗಳೊಂದಿಗೆ ಆಚರಣೆಗೊಳಿಸಲಾಗುತ್ತಿದೆ. ಈ ಬಸ್ಸುಗಳಲ್ಲಿ ಕಾಲು ಇರಿಸಲು ಉತ್ತಮ ಸ್ಥಳಾವಕಾಶ, 3+2 ಆಸನಗಳ ವ್ಯವಸ್ಥೆಯಿರುವುದರಿಂದ ಸಾಮಾನ್ಯ ಬಸ್ಸುಗಳಿಗಿಂತ ಹೆಚ್ಚಿನ ಆರಾಮದಾಯಕತೆ ದೊರೆಯಲಿದೆ. ಗುತ್ತಿಗೆ ಆಧಾರದ ಹಾಗೂ ಸಾಂದರ್ಭಿಕ ಒಪ್ಪಂದದ ಸೇವೆಗಳಿಗೆ ಅಚ್ಚುಮೆಚ್ಚಿನದಾಗಿರುತ್ತದೆ. ಆದಾಗ್ಯೂ ಸಾಮಾನ್ಯ ಸೇವೆಗಳ ದರಗಳಲ್ಲಿ ಆಚರಣೆಗೊಳಿಸಲಾಗುತ್ತಿದೆ. 308 ಸೇವೆಗಳು ಆಚರಣೆಯಲ್ಲಿರುತ್ತವೆ.**

**3. ವಜ್ರ (ವೋಲ್ವೋ) ಸೇವೆಗಳು : 2006 ರಲ್ಲಿ ಪರಿಚಯಿಸಲಾಗಿದ್ದು, ಪ್ರಸ್ತುತ 500 ಉತ್ತಮ ಗುಣಮಟ್ಟದ ಹವಾ-ನಿಯಂತ್ರಣ ಪ್ರಿಮೀಯಂ ಸೇವೆಗಳು ಆಚರಣೆಯಲ್ಲಿರುತ್ತವೆ. ಇವುಗಳಲ್ಲಿ ಹೆಚ್ಚಿನ ಆರಾಮದಾಯ, ಮಾಲಿನ್ಯ ಹಾಗೂ ಶಬ್ದ ರಹಿತವಾದ್ದರಿಂದ ಬೆಂಮಸಾಸಂಸ್ಥೆಯಲ್ಲಿ ಆಚರಣೆಯಲ್ಲಿರುವ ಸೇವೆಗಳಲ್ಲಿಯೇ ಅತ್ಯುತ್ತಮವಾಗಿದ್ದಾಗಿರುತ್ತದೆ. ಇವುಗಳಲ್ಲಿ ಅಂಗವಿಕಲ ಪ್ರಯಾಣಿಕರು ಹತ್ತಲು ಇಳಿಯಲು ಅನುಕೂಲವಾಗುವಂತೆ ಕೆಳಹಂತಸ್ತಿನ ಮೆಟ್ಟಿಲು ವ್ಯವಸ್ಥೆಯ ತಾಂತ್ರಿಕತೆಯನ್ನು ಅಳವಡಿಸಲಾಗಿರುತ್ತದೆ. ಸಾಮಾನ್ಯ ಹವಾನಿಯಂತ್ರಣರಹಿತ ಸೇವೆಗಳ ದರಗಳಿಗಿಂತ ಹೆಚ್ಚಿನ ದರದಲ್ಲಿ ಈ ಸೇವೆಗಳು ಆಚರಣೆಯಲ್ಲಿರುತ್ತವೆ. ಮಾಹಿತಿ ತಂತ್ರಜ್ಞಾನ ವಲಯಗಳಲ್ಲಿ ಉದಾ. ಹೊಸೂರು ರಸ್ತೆ, ಮಾರತ್ತಹಳ್ಳಿ, ವೈಟ್‌ಫೀಲ್ಡ್ ಇತ್ಯಾದಿ ಕಡೆ ಹೆಚ್ಚಿನ ಜನಪ್ರಿಯತೆಯನ್ನು ಪಡೆದಿರುತ್ತದೆ.**

**4. ವಾಯುವಜ್ರ (ವಿಮಾನನಿಲ್ದಾಣ ಮೀಸಲು ಸೇವೆಗಳು): ಸಾರ್ವಜನಿಕ ಸಾರಿಗೆ ವ್ಯಾಪ್ತಿಯಿಂದ ಹೊರಗಿನ ವಲಯದಲ್ಲಿ ವೈಯಕ್ತಿಕ ಸಾರಿಗೆ & ಅರೆ ವೈಯಕ್ತಿಕ ಸಾರಿಗೆಗೆ ಬದಲಿ ಸಾರಿಗೆಯಾಗಿ ಉತ್ತಮ ಗುಣಮಟ್ಟದ ಸಾರಿಗೆ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಈ ಸೇವೆಗಳನ್ನು 2008 ರಲ್ಲಿ ಪರಿಚಯಿಸಲಾಗಿರುತ್ತದೆ. ಪ್ರಸ್ತುತ 62 ಸೇವೆಗಳನ್ನು 09 ಮಾರ್ಗಗಳಲ್ಲಿ ನಗರದ ಪ್ರತಿಷ್ಟಿತ ಸ್ಥಳಗಳಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ 24x7 ಮಾದರಿಯಲ್ಲಿ ಸಾರಿಗೆ ಸೌಲಭ್ಯವನ್ನು ಒದಗಿಸುತ್ತಿದೆ. ಈ ಸೇವೆಗಳು ಹೆಚ್ಚಿನ ಮೆಚ್ಚುಗೆ ಹಾಗೂ ಜನಮನ್ನಣೆ ಗಳಿಸಿವೆ.**

**ವಿಶೇಷ ಸೇವೆಗಳು :**

- **ಗುತ್ತಿಗೆ ಆಧಾರದ ಸೇವೆಗಳು : ಬೆಂಮಸಾಸಂಸ್ಥೆಯು ಸಾಮಾನ್ಯ/ಪುಷ್ಪಕ್/ಜನಪ್ರಿಯವಾಹಿನಿ/ಪುಷ್ಪಕ್+ ಬಸ್ಸುಗಳನ್ನು ನಿರಂತರವಾಗಿ ಗುತ್ತಿಗೆ ಆಧಾರದ ಮೇಲೆ ಕೋರುವ ಕಾರ್ಖಾನೆಗಳು, ವಿದ್ಯಾಸಂಸ್ಥೆಗಳು, ಇತರ ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಗಳಿಗೆ ಆಚರಣೆಗೊಳಿಸುತ್ತಿದೆ. ಈ ಸೇವೆಗಳನ್ನು ಎರಡೂ ಕಂಪನಿಗಳ ನಡುವಿನ ಒಪ್ಪಂದಗೊಳಪಟ್ಟು ಆಚರಣೆಗೊಳಿಸಲಾಗುತ್ತದೆ. ಪ್ರಸ್ತುತ 99 ಗ್ರಾಹಕ ಕಂಪನಿಗಳಿಗೆ ಪ್ರತಿದಿನ ಬೆಂಗಳೂರು ನಗರದ ಸುತ್ತಮುತ್ತ 75,979.8 ಕಿ.ಮೀಗಳನ್ನು ಕ್ರಮಿಸುತ್ತಾ 1749 ಸುತ್ತುವಳಿಗಳನ್ನು ಆಚರಣೆಗೊಳಿಸಲಾಗುತ್ತಿದೆ. ಈ ಸೇವೆಗಳು ಹೆಚ್ಚಿನ ಗುಣಮಟ್ಟದಿಂದಾಗಿ ಗ್ರಾಹಕರಿಂದ ಉತ್ತಮ ಮನ್ನಣೆಗಳಿಸಿದೆ.**

  ಬೆಂಮಸಾಸಂಸ್ಥೆಯು ಗುತ್ತಿಗೆ ಆಧಾರದ ಸೇವೆಗಳಲ್ಲಿ ಗ್ರಾಹಕರಿಗೆ ವಿವಿಧ ಪ್ಯಾಕೇಜ್ಗಳಿಗನುಗುಣವಾಗಿ ವಿವಿಧ ದರವ್ಯವಸ್ಥೆಯನ್ನು ಒದಗಿಸಿದ್ದು ವಿವರಗಳನ್ನು ಅನುಬಂಧ-ಏ ರಲ್ಲಿ ಲಗತ್ತಿಸಿದೆ.

- **ಸಾಂದರ್ಭಿಕ ಒಪ್ಪಂದದ ಸೇವೆಗಳು : ಜಾತ್ರೆ, ಪ್ರವಾಸ, ಮದುವೆ ಮತ್ತು ಇತರ ಸಮಾರಂಭಗಳಿಗೆ ಬಸ್ಸುಗಳನ್ನು ಸಾಂದರ್ಭಿಕ ಒಪ್ಪಂದದ ಮೇಲೆ ಬೆಂಮಸಾಸಂಸ್ಥೆಯು ನೀಡುತ್ತಿರುತ್ತದೆ. ಇದರಡಿಯಲ್ಲಿ ಗಂಟೆ ಹಾಗೂ ದಿನಲೆಕ್ಕದಲ್ಲಿಯೂ ಸೇವೆಯನ್ನು ಪಡೆಯಬಹುದಾಗಿರುತ್ತದೆ. ವಿವರಗಳನ್ನು ಅನುಬಂಧ-ಐ ರಲ್ಲಿ ಲಗತ್ತಿಸಿದೆ.**

  ಆಸಕ್ತಿಯುಳ್ಳ ಸಾರ್ವಜನಿಕರು ಅನುಬಂಧ-ಎ ರಲ್ಲಿ ಲಗತ್ತಿಸಿರುವ ಟಕವ್ಯವಸ್ಥಾಪಕರುಗಳ ಅಥವಾ ನಿಲ್ದಾಣಾಧಿಕಾರಿಗಳ ದೂರವಾಣಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

- **ಮಹಿಳಾ ವಿಶೇಷ : ಮಹಿಳಾ ಪ್ರಯಾಣಿಕರು ಮತ್ತು 12 ವರ್ಷದೊಳಗಿನ ಎಲ್ಲಾ ಮಕ್ಕಳ ಅನುಕೂಲಕ್ಕಾಗಿ ವಿಶೇಷ ಮಾದರಿಯ ಬಸ್ಸುಗಳನ್ನು ಈ ಸೇವೆಗಳನ್ನು ಆಚರಣೆಗೊಳಿಸಲಾಗುತ್ತಿದೆ, ದುಡಿಯುವ ಮಹಿಳೆಯರನ್ನು ಗಮನದಲ್ಲಿರಿಸಿ ಅವರು ಕರ್ತವ್ಯ ನಿರ್ವಹಿಸುವ ಸ್ಥಳ ಹಾಗೂ ವಾಸಸ್ಥಳಕ್ಕೆ ಪ್ರಯಾಣಿಸಲು ಅನುಕೂಲವಾಗುವಂತೆ ಸೇವೆ ಒದಗಿಸಲಾಗುತ್ತಿದೆ. ಪ್ರಸ್ತುತ 22 ಮಹಿಳಾ ವಿಶೇಷ ಸುತ್ತುವಳಿಗಳನ್ನು ನಗರ ಕೇಂದ್ರಭಾಗದಿಂದ ವಿವಿಧ ಬಡಾವಣೆಗಳಿಗೆ ಬೆಳಿಗ್ಗೆ ಹಾಗೂ ಸಂಜೆ ಒತ್ತಡದ ಸಮಯದಲ್ಲಿ ಆಚರಣೆಗೊಳಿಸಲಾಗುತ್ತಿದೆ.**

ಆಸ್ಪತ್ರೆ ವಿಶೇಷ : ಪ್ರಮುಖ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ಸಂಪರ್ಕ ಕಲ್ಪಿಸಲು ಬ್ರಾಂಡೆಡ್ ಮಿನಿ ಬಸ್ಸು ಗಳನ್ನು ಖಆಸ್ಪತ್ರೆ ವಿಶೇಷಖ ಮಾದರಿಯ ಬಸ್ಸು ಗಳಾಗಿ ಪರಿವರ್ತಿಸಿ ಆಚರಣೆ ಮಾಡಲಾಗುತ್ತಿದೆ. ಪ್ರಸ್ತುತ 4 ಬಸ್ಸು ಗಳು ಆಚರಣೆಯಲ್ಲಿವೆ. ಈ ಸೇವೆಗಳು ವಿಶೇಷವಾಗಿ ಗ್ರಾಮೀಣ ಭಾಗದಿಂದ ನಗರಕ್ಕೆ

- ವೈದ್ಯಕೀಯ ಚಿಕಿತ್ಸೆಗಾಗಿ ಬರುವ ಸಾರ್ವಜನಿಕರಿಗೆ ಉಪಯೋಗವಾಗಲಿದೆ.

- ಬೆಂಗಳೂರು ರೌಂಡ್ಸ್: ವಿಶೇಷ ಮಾದರಿಯಲ್ಲಿ ರಚಿಸಿರುವ ಹವಾನಿಯಂತ್ರಿತ ಬಸ್ಸನ್ನು ಬೆಂಗಳೂರು ನಗರ ವೀಕ್ಷಸಲಿಚ್ಛಿಸುವ ಪ್ರಯಾಣಿಕರ ಅನುಕೂಲಕ್ಕಾಗಿ ಕೆಂಪೆಗೌಡ ಬಸ್ ನಿಲ್ದಾಣದಿಂದ ಆಚರಣೆ ಮಾಡಲಾಗುತ್ತಿದೆ. ಈ ಸೇವೆಗಳಲ್ಲಿ ಪ್ರಯಾಣಿಸಲು ಕರಾರಸಾನಿಗಮದ ಆನ್ಲೈನ್ ಮುಂಗಡ ಟಿಕೇಟ್ ಕಾಯ್ದಿರಿಸುವಿಕೆಯಲ್ಲಿ ಟಿಕೇಟನ್ನು ಕಾಯ್ದಿರಿಸಬಹುದಾಗಿರುತ್ತದೆ.

- ವರ್ತುಲ ರಸ್ತೆ ಸೇವೆ: ಸುಮಾರು 280 ಅನುಸೂಚಿಗಳನ್ನು ಹೊರವರ್ತುಲ ರಸ್ತೆ ಸೇವೆಗಾಗಿ ಆಚರಣೆ ಮಾಡಲಾಗುತ್ತಿದೆ. ಇವುಗಳ ಆಚರಣೆಯಿಂದ ನಗ ಮಧ್ಯಭಾಗದಲ್ಲಿ ಒತ್ತಡವನ್ನು ಕಡಿಮೆ ಮಾಡಲು ಸಹಾಯಕವಾಗಿವೆ. ಪ್ರಸ್ತುತ ಬೆಂಮಸಾಸಂಸ್ಥೆಯು ಈ ಸೇವೆಗಳನ್ನು ಬಿಗ್-10 ಹಾಗೂ ಇತರ ಸೇವೆಗಳಂತೆ ತನ್ನದೇ ಆದ ಛಾಪನ್ನು ಮೂಡಿಸಲು ಹಂತ ಹಂತವಾಗಿ ಬ್ರಾಂಡ್ಗೊಳಿಸಲಾಗುತ್ತಿದೆ.

- ಒತ್ತಡ ಸಮಯದ ಸೇವೆ: ಬೆಳಿಗ್ಗೆ ಮತ್ತು ಸಂಜೆ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಈ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ. ಪ್ರಮುಖವಾಗಿ ಆಡಳಿತಾತ್ಮಕ ಕಛೇರಿಗಳಾದ ವಿಧಾನಸೌಧ ಮತ್ತು ಸುತ್ತಮುತ್ತಲಿನ ಕಛೇರಿಗಳ ಸಿಬ್ಬಂದಿಗಳಿಗೆ ಅನುಕೂಲವಾಗುವಂತೆ ಇವುಗಳನ್ನು ಆಚರಣೆ ಮಾಡಲಾಗುತ್ತಿದೆ. ಈ ಸೇವೆಗಳನ್ನು ಕಛೇರಿ ನೌಕರರ ಸಮಯಕ್ಕನುಗುಣವಾಗಿ ಆಚರಣೆ ಮಾಡಲಾಗುತ್ತಿದೆ.

- ರಾತ್ರಿ ಸೇವೆಗಳು : ನಗರಕ್ಕೆ ದೂರದ ಊರುಗಳಿಂದ ತಡವಾಗಿ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ಹಾಗೂ ಬಹುಮುಂಜಾನೆ ಹೊರಪ್ರದೇಶಗಳಿಗೆ ಪ್ರಯಾಣಿಸುವವರ ಅನುಕೂಲಕ್ಕಾಗಿ ರಾತ್ರಿ/ತಡರಾತ್ರಿ ಸೇವೆಗಳನ್ನು ಸಂಸ್ಥೆಯು ಆಚರಣೆ ಮಾಡುತ್ತಿದೆ. ಈ ಸೇವೆಗಳನ್ನು ಕೆಂಪೆಗೌಡ ಬಸ್ ನಿಲ್ದಾಣದಿಂದ ನಗರ ಹಾಗೂ ಸುತ್ತಮುತ್ತಲಿನ ಪ್ರಮುಖ

**ಬಡಾವಣೆಗಳನ್ನು ಒಳಗೊಂಡಂತೆ ಆಚರಣೆ ಮಾಡಲಾಗುತ್ತಿದೆ. ರಾತ್ರಿ 1200 ಗಂಟೆವರೆಗೆ ಹಾಗೂ ಬೆಳಗ್ಗೆ 0400 ಗಂಟೆಯಿಂದ ಈ ಸೇವೆಗಳನ್ನು ಆಚರಣೆ ಮಾಡಲಾಗುತ್ತಿದೆ. ಈ ಸೇವೆಯಲ್ಲಿ ಬಸ್ ಪ್ರಯಾಣ ದರವು ಸಾಮಾನ್ಯ ದರಕ್ಕಿಂತ ಅರ್ಧಪಟ್ಟು ಹೆಚ್ಚಿರುತ್ತದೆ. ಪ್ರಸ್ತುತ 68 ರಾತ್ರಿ ಸೇವೆಗಳ ಅನುಸೂಚಿಗಳು ಆಚರಣೆಯಲ್ಲಿವೆ.**

ಫೀಡರ್ ಸೇವೆಗಳು: ಒಂದು ಬಡಾವಣೆಯಿಂದ ಮತ್ತೊಂದು ಬಡಾವಣೆಗೆ ನೇರ ಸಂಪರ್ಕ ಕಲ್ಪಿಸುವ ದೃಷ್ಟಿಯಿಂದ ಹಾಗೂ ಹೆಚ್ಚಿನ ಜನ ಸಾಂದ್ರತೆ ಇರುವ

- ಪ್ರದೇಶದಲ್ಲಿ ಅಗತ್ಯಕ್ಕನುಗುಣವಾಗಿ ನಗರದ ಆಯ್ದ ವಿವಿಧ ಕಡೆಗಳಲ್ಲಿ ಈ ರೀತಿಯ ಸಾರಿಗೆ ಕಾರ್ಯಾಚರಣೆಯನ್ನು ಮಾಡಲಾಗುತ್ತಿದೆ. ಇವುಗಳನ್ನು ಕೆಲವು ಆಯ್ದ ಹೆಚ್ಚಿನ ಜನಸಂದಣಿ ಇರುವ ಸ್ಥಳಗಳಲ್ಲಿ ಪ್ರಾಯೋಗಿಕವಾಗಿ ಆಚರಣೆಗೊಳಿಸಲಾಗುತ್ತಿದೆ. ಪ್ರಸ್ತುತ ಇಂತಹ ಸೇವೆಗಳು ಆಚರಣೆಯಲ್ಲಿದ್ದು ನೆರೆಹೊರೆಯ ಸೇವೆಗಳೆಂದೇ ಹೆಸರು ಪಡೆದಿವೆ.

- **ಮೆಟ್ರೋ ಫೀಡರ್ ಸೇವೆಗಳು : ಸುತ್ತಮುತ್ತಲಿನ ನೆರೆಹೊರೆಯ ಬಡಾವಣೆಗಳಿಂದ ಮೆಟ್ರೋ ಸ್ಟೇಷನ್ಗಳಿಗೆ ಉತ್ತಮ ಸಾರಿಗೆ ಸಂಪರ್ಕ ಕಲ್ಪಿಸುವ ಉದ್ದೇಶದಿಂದ ಈ ಸೇವೆಗಳನ್ನು ಇತ್ತೀಚಿಗೆ ಪರಿಚಯಿಸಲಾಗಿರುತ್ತದೆ. ಇವುಗಳಿಂದ ಪ್ರಯಾಣಿಕರಿಗೆ ಮೊದಲ ಹಾಗೂ ಕೊನೆಯ ಸಂಪರ್ಕ ಸಾಧ್ಯವಾಗಲಿದೆ. ಮೆಟ್ರೋ ರೈಲಿನ ವಿಸ್ತರಣೆಯಂತೆ ಈ ಸೇವೆಗಳನ್ನು ವಿಸ್ತರಣೆಗೊಳಿಸಲು ಬೆಂಮಸಾಸಂಸ್ಥೆಯು ಯೋಜಿಸಿದೆ. ಪ್ರಸ್ತುತ 143 ಸೇವೆಗಳನ್ನು ಆಚರಣೆಗೊಳಿಸಲಾಗುತ್ತಿದೆ.**
-

**ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಆಚರಣೆಯಲ್ಲಿರುವ ಬೆಂಮಸಾಸಂಸ್ಥೆಯ ಸೇವೆಯ ವಿವರಗಳು (ವಾಯುವಜ್ರ ಸೇವೆಯ ವಿವರಗಳು )**

| ಮಾರ್ಗ ಸಂಖ್ಯೆ | ಇಂದ | ವರೆಗೆ |
|---|---|---|
| ಬಿಐಎಎಸ್-4 | ಹೆಚ್ಎಎಲ್ ಮುಖ್ಯ ದ್ವಾರ | ಬಿಐಎಎಲ್ |
| ಬಿಐಎಎಸ್-5 | ಜೆಪಿ ನಗರ 6ನೇ ಹಂತ | ಬಿಐಎಎಲ್ |
| ಬಿಐಎಎಸ್-6 | ಕಾಡುಗೋಡಿ ಬಸ್ ನಿಲ್ದಾಣ | ಬಿಐಎಎಲ್ |
| ಬಿಐಎಎಸ್-7 | ಹೆಚ್ಎಸ್ಆರ್ ಬಡಾವಣೆ ಬಿಡಿಎ ಕಾಂಪ್ಲೆಕ್ಸ್ | ಬಿಐಎಎಲ್ |

| | | |
|---|---|---|
| ಬಿಐಎಎಸ್-7ಎ | ಹೆಚ್‌ಎಸ್‌ಆರ್ ಬಡಾವಣೆ ಬಿಡಿಎ ಕಾಂಪ್ಲೆಕ್ಸ್ | ಬಿಐಎಎಲ್ |
| ಬಿಐಎಎಸ್-8 | ಎಲೆಕ್ಟ್ರಾನಿಕ್ ಸಿಟಿ | ಬಿಐಎಎಲ್ |
| ಬಿಐಎಎಸ್-9 | ಕೆಂಪೆಗೌಡ ಬಸ್ ನಿಲ್ದಾಣ | ಬಿಐಎಎಲ್ |
| ಬಿಐಎಎಸ್-10 | ಚಿಕ್ಕಲಸಂದ್ರ ಬಸ್ ನಿಲ್ದಾಣ | ಬಿಐಎಎಲ್ |
| ಬಿಐಎಎಸ್-12 | ಕುವೆಂಪುನಗರ (ಬಿಟಿಎಂ ಬಡಾವಣೆ) | ಬಿಐಎಎಲ್ |

## 1. ಬಸ್ ನಿಲ್ದಾಣಗಳಲ್ಲಿನ ಪ್ರಯಾಣಿಕರ ಮೂಲಭೂತ ಸೌಕರ್ಯಗಳು :

ಸಂಸ್ಥೆಯು ಪ್ರಮುಖ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ಸ್ನೇಹಿ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ. ಈ ಸ್ಥಳಗಳಿಂದ ಸಾರ್ವಜನಿಕರಿಗೆ ಸಾರಿಗೆ ಸೌಲಭ್ಯ ದೊರಕುತ್ತಿದೆ. ಈ ಕೇಂದ್ರಗಳಲ್ಲಿ ಪ್ರಯಾಣಿಕರ ಪಾಸುಗಳನ್ನು ಸಹ ವಿತರಣೆಗೊಳಿಸಲಾಗುತ್ತಿದೆ. ಪ್ರಸ್ತುತ ಸಂಸ್ಥೆಯಲ್ಲಿರುವ ಪ್ರಮುಖ ಬಸ್ ನಿಲ್ದಾಣಗಳೆಂದರೆ

***ಅ. ಕೆಂಪೆಗೌಡ ಬಸ್ ನಿಲ್ದಾಣ***

***ಆ. ಕೃ.ರಾ.ಮಾರುಕಟ್ಟೆ ಬಸ್ ನಿಲ್ದಾಣ***

***ಇ. ಶಿವಾಜಿನಗರ ಬಸ್ ನಿಲ್ದಾಣ***

ಇವುಗಳಲ್ಲದೆ 34 ಸಣ್ಣ ಬಸ್ ನಿಲ್ದಾಣಗಳು ನಗರದಾದ್ಯಂತ ವ್ಯಾಪಿಸಿದ್ದು, ಸ್ಥಳೀಯರ ಅಗತ್ಯಕ್ಕನುಗುಣವಾಗಿ ಪ್ರಯಾಣಿಕರ ಮೂಲಭೂತ ಸೌಕರ್ಯಗಳನ್ನು ಹೊಂದಿವೆ. ಈ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯದ ಬಗ್ಗೆ ಸುಲಭ ಹಾಗೂ ಸ್ಪಷ್ಟ ಮಾಹಿತಿಯನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಅಲ್ಲದೇ ಪುರುಷರಿಗೆ, ಮಹಿಳೆಯರಿಗೆ ಪ್ರತ್ಯೇಕ ಶುಚಿಯಾ ಶೌಚಾಲಯ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಬಸ್ಸಿಗಾಗಿ ಕಾಯುವ ಪ್ರಯಾಣಿಕರ ಅಗತ್ಯಕ್ಕನುಗುಣವಾಗಿ ಬಸ್ಸಿಗಾಗಿ ಕಾಯುವ ಪ್ರಯಾಣಿಕರಿಗೆ ಬೆಂಚುಗಳ ಸೌಲಭ್ಯ, ವಿಚಾರಣೆ, ದೂರುಗಳಿಗೆ ಮತ್ತು ಪಾಸುಗಳನ್ನು

ಕೊಡುವುದಕ್ಕಾಗಿ ಕೌಂಟರ್ಗಳು, ಪಾಸ್ ಕೌಂಟರ್ಗಳು, ಉಪಹಾರ ಗೃಹ, ಜನರಲ್ ಸ್ಟೋರ್ಸ್, ಮೆಡಿಕಲ್ ಸ್ಟೋರ್, ಸಾರ್ವಜನಿಕ ದೂರವಾಣಿ ಬೂತುಗಳ ವ್ಯವಸ್ಥೆ, ಅಂಗವಿಕಲರಿಗೆ ಗಾಲಿ ಕುರ್ಚಿಯ ವ್ಯವಸ್ಥೆ ಇತ್ಯಾದಿ ವ್ಯವಸ್ಥೆಯನ್ನು ಒದಗಿಸಿದೆ.

**ಬೆಂಗಳೂರು ನಗರದಾದ್ಯಂತ 34 ಸಣ್ಣ ಬಸ್ ನಿಲ್ದಾಣಗಳಿದ್ದು, ಎಲ್ಲಾ ಬಸ್ ನಿಲ್ದಾಣಗಳಲ್ಲೂ ಪ್ರಯಾಣಿಕರ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳುತ್ತಿದೆ. 34 ಸಣ್ಣ ಬಸ್ ನಿಲ್ದಾಣಗಳೆಂದರೆ ಆಸ್ಟಿನ್ ಟೌನ್, ಬಿಟಿಎಂ ಲೇಔಟ್, ಬಸವೇಶ್ವರ ನಗರ, ಚಂದ್ರಾ ಲೇಔಟ್, ಚೆನ್ನಮ್ಮನ ಕೆರೆ ಅಚ್ಚುಕಟ್ಟು, ಎಲೆಕ್ಟ್ರಾನಿಕ್ ಸಿಟಿ, ಜೀವನ್ಭೀಮಾನಗರ, ಕಾಡುಗೋಡಿ, ಕಾವಲ್ ಬೈರಸಂದ್ರ, ಕಲ್ಯಾಣ ನಗರ, ಕುಮಾರಸ್ವಾಮಿ ಲೇಔಟ್, ಮಲ್ಲೇಶ್ವರಂ 18ನೇ ಕ್ರಾಸ್, ಮುನೇಶ್ವರ ಬ್ಲಾಕ್, ನಂದಿನಿ ಲೇಔಟ್, ಪಿಳ್ಳಣ್ಣ ಗಾರ್ಡನ್, ವಿಜಯನಗರ ಪೂರ್ವ, ವಿವೇಕ ನಗರ, ವಿದ್ಯಾ ನಗರ, ಯಲಹಂಕ ಉಪನಗರ, ಯಲಹಂಕ ಉಪನಗರ 5ನೇ ಹಂತ, ಹೆಸರಘಟ್ಟ, ವಿಶ್ವೇಶ್ವರಯ್ಯ ಲೇಔಟ್, ನಾಗರಬಾವಿ, ರಾಜರಾಜೇಶ್ವರಿನಗರ, ಬಿಡದಿ, ಚಿಕ್ಕಮಾರನಹಳ್ಳಿ, ಚಿಕ್ಕಲಸಂದ್ರ, ಸೂರ್ಯಸಿಟಿ, ತಾವರೆಕೆರೆ, ಲಗ್ಗೆರೆ, ಲಕ್ಷ್ಮಿದೇವಿನಗರ, ಭಾರತ್ ನಗರ, ಕೆ.ಆರ್ ಪುರಂ, ವಿದ್ಯಾರಣ್ಯಪುರ.**

**ಸಂಚಾರ & ಸಾಗಣೆ ನಿರ್ವಹಣಾ ಕೇಂದ್ರ (ಟಿಟಿಎಂಸಿಗಳು)**

ಸಾರ್ವಜನಿಕ ಸಾರಿಗೆಯನ್ನು ಪ್ರಸಿದ್ಧಿಗೊಳಿಸಲು, ಬೆಂಮಸಾಸಂಸ್ಥೆಯು ಸಂಚಾರ & ಸಾಗಣೆ ನಿರ್ವಹಣಾ ಕೇಂದ್ರಗಳನ್ನು ನಿರ್ಮಿಸುವ ಹೊಸ ಅವಿಷ್ಕಾರವನ್ನು ಕೈಗೆತ್ತಿಕೊಂಡಿರುತ್ತದೆ. ಇದರಡಿಯಲ್ಲಿ ಒಂದೇ ಸೂರಿನಡಿ ಸಾರ್ವಜನಿಕ ಸಾರಿಗೆಯ ಜೊತೆಗೆ ಇತರ ಅನೇಕ ಸವಲತ್ತುಗಳು ಪ್ರಯಾಣಿಕರಿಗೆ/ಸಾರ್ವಜನಿಕರಿಗೆ ಲಭಿಸುವ ವ್ಯವಸ್ಥೆಯೊಂದಿಗೆ ನಿರ್ಮಾಣಗೊಂಡಿರುತ್ತದೆ. ನಗರದ ಪ್ರಮುಖ ಸ್ಥಳಗಳನ್ನು ಈ ಸಂಬಂಧ ಗುರ್ತಿಸಲಾಗಿರುತ್ತದೆ. ಮೊದಲ ಹಂತದಲ್ಲಿ 10 ಟಿಟಿಎಂಸಿಗಳನ್ನು ನಿರ್ಮಿಸಿದ್ದು ಒಟ್ಟಾರೆ 25 ಟಿಟಿಎಂಸಿಗಳನ್ನು ನಿರ್ಮಿಸುವ ಗುರಿಯನ್ನು ಹೊಂದಿರುತ್ತದೆ. ಈ 10 ಟಿಟಿಎಂಸಿಗಳು ಈಗಾಗಲೇ ಆಚರಣೆಯಲ್ಲಿದ್ದು ವಿವರಗಳು ಕೆಳಕಂಡಂತಿವೆ.

ಶಾಂತಿನಗರ
ಕೆಂಗೇರಿ
ಬನಶಂಕರಿ
ವಿಜಯನಗರ

ಬನ್ನೇರುಟ್ಟ
ಜಯನಗರ 4ನೇ ಬ್ಲಾಕ್
ದೊಮ್ಮಲೂರು
ಯಶವಂತಪುರ
ಕೋರಮಂಗ
ಐ.ಟಿ.ಪಿ.ಎಲ್

6. ಪ್ರಯಾಣಿಕರ ಪಾಸು ವ್ಯವಸ್ಥೆ: ಬೆಂಮಸಾಸಂಸ್ಥೆಯು ಪಾಸು ವ್ಯವಸ್ಥೆಯು ಸಾರ್ವಜನಿಕ ಪ್ರಯಾಣಿಕರಿಂದ ಮನ್ನಣೆ ಗಳಿಸಿದೆ. ವಿವಿಧ ವರ್ಗದವರ ಅಗತ್ಯಕ್ಕನುಗುಣವಾಗಿ ವಿವಿಧ ರೀತಿಯ ಪಾಸುಗಳನ್ನು ಜಾರಿಗೆ ತಂದಿರುತ್ತದೆ. ಈ ಪಾಸು ವ್ಯವಸ್ಥೆಯು ಸಂಸ್ಥೆಯು ಪಾಸುದಾರರಿಗೆ ಒದಗಿಸಿರುವ ಸೇವೆಯಿಂದ ಜನಪ್ರಿಯಗೊಂಡಿದ್ದು, ಸಂಸ್ಥೆಯ ಶೇ.50 ರಷ್ಟು ಆದಾಯ ಪಾಸು ವಿತರಣೆಯಿಂದ ಬರುತ್ತಿದೆ, ಈ ಸಾರ್ವಜನಿಕ ಪಾಸುಗಳೆಂದರೆ ;

ಅ. ದಿನದ ಪಾಸು

ಆ. ಪ್ರಯಾಣಿಕರ ಮಾಸಿಕ ಪಾಸು

ಈ. ಮಾಸಿಕ ಡೆಡಿಕೇಟೆಡ್ ಪಾಸು

ಈ ಪಾಸುಗಳ ದರ, ಒದಗಿಸಲಾಗಿರುವ ಸೌಲಭ್ಯ ಇತರ ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ. ಸಂ | ಪಾಸಿನ ಮಾದರಿ | ಒದಗಿಸಲಾಗಿರುವ ಸೌಲಭ್ಯ | ದರ | ವಿತರಣೆಯಲ್ಲಿರುವ ಸಂಖ್ಯೆ |
|---|---|---|---|---|
| 1 | **ದಿನದ ಪಾಸು** (ಸೆಪ್ಟೆಂಬರ್ 2003 ರಿಂದ ಜಾರಿಗೆ ತರಲಾಗಿದೆ) | ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400 ಗಂಟೆಯವರೆಗೆ) ಸಂಸ್ಥೆಯ ಹವಾನಿಯಂತ್ರಿತ, ವೋಲ್ವೋ ಮತ್ತು ಗ್ರಾಮಾಂತರ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸೇವೆಗಳಲ್ಲಿ ಎಷ್ಟು ಬಾರಿಯಾದರೂ | .45/- (ರೂ.25/- ಅಥವಾ ರೂ.100/-ರ ಗುರುತಿನ ಚೀಟಿಯೊಂದಿಗೆ ಮಾತ್ರ ) | ಪ್ರತಿ ದಿನ 1.30 ಲಕ್ಷ |

| | | | | |
|---|---|---|---|---|
| | | ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ. | ರೂ.50/- (ಗುರುತಿನ ಚೀಟಿ ರಹಿತ) | |
| 2. | **ಗೋಲ್ಡ್ ದಿನದ ಪಾಸು** | ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400 ಗಂಟೆಯವರೆಗೆ) ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ (ವಾಯುವಜ್ರ ಸೇವೆ ಹೊರತು ಪಡಿಸಿ) ಎಷ್ಟು ಬಾರಿಯಾದರೂ ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ | ರೂ.110/- | 5000 ದಿನಕ್ಕೆ |
| 3 | **ಎಸಿ ಸುವರ್ಣ ದಿನದ ಪಾಸು** | ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400) ಗಂಟೆಯವರೆಗೆ) ಸಂಸ್ಥೆಯ ವಾಯುವಜ್ರ ಮತ್ತು ವಜ್ರ ಸೇವೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸೇವೆಗಳಲ್ಲಿ ಎಷ್ಟು ಬಾರಿಯಾದರೂ ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ. | ರೂ.70/- | 300 ದಿನಕ್ಕೆ |
| 5 | **<u>ಪ್ರಯಾಣಿಕರ ಮಾಸಿಕ ಪಾಸುಗಳು</u>** (1998 ರಿಂದ ಜಾರಿಗೆ ತರಲಾಗಿದೆ)<br><br>ಅ) ಕಪ್ಪು ಹಲಗೆ ಪಾಸುಗಳು | ನಗರ ಸೇವೆಗಳಲ್ಲಿ ಮಿತಿಯಿಲ್ಲದೇ ಪ್ರಯಾಣಿಸಬಹುದಾಗಿರುತ್ತದೆ. | .625/-<br><br>. 825/- | 40,000 /ತಿಂಗಳಿಗೆ |

| | | | | |
|---|---|---|---|---|
| | ಆ) ಪುಷ್ಪಕ್/ಕೆಂಪುಹಲಗೆ ಪಾಸುಗಳು<br><br>ಈ) ಗುರುತಿನ ಚೀಟಿ | ನಗರ, ಹೊರವಲಯ ಹಾಗೂ ಪುಷ್ಪಕ್ ಸೇವೆಗಳಲ್ಲಿ ಮಿತಿಯಿಲ್ಲದೇ ಪ್ರಯಾಣಿಸಬಹುದಾಗಿರುತ್ತದೆ.<br>3 ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ. | .100/- | 2.45 ಲಕ್ಷ / ಮಾಸಿಕ |
| 6 | **ಗೋಲ್ಡ್ ಮಾಸಿಕ ಪಾಸು** (ಮೇ 2008 ರಿಂದ ಜಾರಿಗೆ ತರಲಾಗಿದೆ) | ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಚರಣೆಯಾಗುವ ವಾಯುವಜ್ರ ಸೇವೆಯನ್ನು ಹೊರತುಪಡಿಸಿ ಎಲ್ಲಾ ಇತರೆ ಸೇವೆಗಳಲ್ಲಿ ಒಂದು ದಿನಚರಿ ತಿಂಗಳ ಅವಧಿಗೆ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. | ರೂ.1800/- (ರೂ. 100/- ರ ಗುರುತಿನ ಚೀಟಿಯೊಂದಿಗೆ)<br><br>ರೂ.1850/- (ಗುರುತಿನ ಚೀಟಿರಹಿತ) | 14,000/ ಮಾಸಿಕ |
| 7 | **ಹೊರವಲಯ-ಕಮ್-ಟ್ರಂಪೆಟ್ ಪಾಸು** (ಜುಲೈ 2008 ರಿಂದ ಜಾರಿಗೆ ತರಲಾಗಿದೆ) | ಎಲ್ಲಾ ನಗರ, ಹೊರವಲಯ ಹಾಗೂ ಟ್ರಂಪೆಟ್ ಮತ್ತು ವಿಮಾನ ನಿಲ್ದಾಣದ ನಡುವೆ ಆಚರಣೆಯಾಗುವ ಟ್ರಂಪೆಟ್ ಸೇವೆಗಳಲ್ಲಿ ಒಂದು ದಿನಚರಿ ತಿಂಗಳ ಅವಧಿಗೆ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. | . 1100/- | 500 ತಿಂಗಳಿಗೆ |
| 8 | **ವಾಯುವಜ್ರ ಗೋಲ್ಡ್** (ಜುಲೈ 2008 ರಿಂದ ಜಾರಿಗೆ ತರಲಾಗಿದೆ) | ವಿಮಾನ ನಿಲ್ದಾಣಕ್ಕೆ ಆಚರಣೆಯಾಗುವ ವಾಯುವಜ್ರ ಹಾಗೂ ಸುವರ್ಣ ಸೇವೆಗಳೂ ಸೇರಿದಂತೆ ಬೆಂ.ಮ.ಸಾ.ಸಂಸ್ಥೆಯು ಆಚರಣೆ ಮಾಡುವ ಎಲ್ಲಾ ಹವಾನಿಯಂತ್ರಿತ ಹಾಗೂ ಹವಾನಿಯಂತ್ರಣ ರಹಿತ ಸೇವೆಗಳಲ್ಲಿ ಒಂದು ದಿನಚರಿ ತಿಂಗಳ | ಉತ್ತೇಜಕ ದರ ಪ್ರತಿ ಪಾಸಿಗೆ ರೂ.2,900/-<br><br>50 ಅಥವಾ ಹೆಚ್ಚು ಸಾಮೂಹಿಕ ಪಾಸುಗಳ | 2000 ತಿಂಗಳಿಗೆ |

| | | | | |
|---|---|---|---|---|
| | | ಅವಧಿಗೆ ಮಿತಿಯಿಲ್ಲದ ಪ್ರಯಾಣಕ್ಕೆ ಅವಕಾಶ. | ಖರೀದಿಗೆ ವಿಶೇಷ ದರ ಪ್ರತಿ ಪಾಸಿಗೆ ರೂ.2,800/-<br><br>100 ಅಥವಾ ಹೆಚ್ಚು ಸಾಮೂಹಿಕ ಪಾಸುಗಳ ಖರೀದಿಗೆ ವಿಶೇಷ ದರ ಪ್ರತಿ ಪಾಸಿಗೆ ರೂ.2,700/-<br><br>225 ಅಥವಾ ಹೆಚ್ಚು ಸಾಮೂಹಿಕ ಪಾಸುಗಳ ಖರೀದಿಗೆ ವಿಶೇಷ ದರ ಪ್ರತಿ ಪಾಸಿಗೆ ರೂ.2,600/- | |
| **9** | **ಮಾಸಿಕ ಡೆಡಿಕೇಟೆಡ್ ಪಾಸು** | ಈ ಪಾಸುಗಳನ್ನು ಕಛೇರಿ ಹಾಗೂ ಕಂಪನಿಗಳಿಗೆ ಹೋಗುವವರಿಗೆ ವಿತರಿಸುತ್ತಿದ್ದು, ಸದರಿಯವರುಗಳಿಗೆ ಅನುಕೂಲವಾಗುವಂತೆ ಡೆಡಿಕೇಟೆಡ್ ಟ್ರಿಪ್ಗಳನ್ನು ಆಚರಿಸಲಾಗುತ್ತಿದೆ ಹಾಗೂ ಈ ಪಾಸುದಾರರು ಇತರೆ ಸಮಯದಲ್ಲಿ ಹಾಗೂ ರಜಾ ದಿನಗಳಲ್ಲಿ ಸಂಸ್ಥೆಯ ವಾಹನಗಳಲ್ಲಿ ಯಾವುದೇ ನಿರ್ಬಂಧವಿಲ್ಲದೆ ಪ್ರಯಾಣಿಸಬಹುದಾಗಿರುತ್ತದೆ. | ರೂ. 1,900/-<br>ರೂ.1,950/-<br>ರೂ. 2,000/-<br>ರೂ. 2,165/-<br>ರೂ. 2,290/- | 8000 ತಿಂಗಳಿಗೆ |

| | | | | |
|---|---|---|---|---|
| **10** | **ಪುಷ್ಪಕ್ ಡೆಡಿಕೇಟೆಡ್ ಪ್ರೀಮಿಯಂ ಪಾಸುದಾರರ ದಿನದ ಪಾಸು (01.12.2012)** | ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400 ಗಂಟೆಯವರೆಗೆ) ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ (ವಾಯುವಜ್ರ ಸೇವೆ ಹಾಗೂ ಬೆಂಗಳೂರು ರೌಂಡ್ಸ್ ಸೇವೆ ಹೊರತು ಪಡಿಸಿ) ಎಷ್ಟು ಬಾರಿಯಾದರೂ ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ | ರೂ. 40/- | |
| **11** | **ಕೆಂಪು ಹಲಗೆ ಪಾಸುದಾರರ ಗೋಲ್ಡ್ ದಿನದ ಪಾಸು (01.12.2012 ಜಾರಿಗೆ ತರಲಾಗಿದೆ).** | ಈ ಪಾಸುದಾರರು ಒಂದು ಕ್ಯಾಲೆಂಡರ್ ದಿನದಲ್ಲಿ (0000 ಗಂಟೆಯಿಂದ 2400 ಗಂಟೆಯವರೆಗೆ) ಸಂಸ್ಥೆಯ ಎಲ್ಲಾ ಸೇವೆಗಳಲ್ಲಿ (ವಾಯುವಜ್ರ ಹಾಗೂ ಬೆಂಗಳೂರು ರೌಂಡ್ಸ್ ಸೇವೆ ಹೊರತು ಪಡಿಸಿ) ಎಷ್ಟು ಬಾರಿಯಾದರೂ ಬೆಂಮಸಾಸಂಸ್ಥೆಯ ಆಚರಣಾ ವ್ಯಾಪ್ತಿಯಲ್ಲಿ ಪ್ರಯಾಣಿಸಬಹುದಾಗಿರುತ್ತದೆ | ರೂ. 60/- | |
| ಕಪ್ಪು & ಕೆಂಪು ಹಲಗೆ ಪಾಸುದಾರರು, ಹಿರಿಯ ನಾಗರೀಕರ ಪಾಸುದಾರರು ವಜ್ರ ಸೇವೆಗಳಲ್ಲಿ ಪ್ರಯಾಣಿಸಲು ಪ್ರತಿ ಸುತ್ತುವಳಿಗಳಿಗೆ ರೂ. 25/- ರ ರಿಯಾಯಿತಿ ದರದ ಟಿಕೆಟ್ ಪಡೆದು ಪ್ರಯಾಣಿಸಬಹುದಾಗಿರುತ್ತದೆ. ( ಕಪ್ಪು ಹಲಗೆ ಪಾಸುದಾರರು, ಈ ಸೌಲಭ್ಯವನ್ನು ಕಪ್ಪು ಹಲಗೆ ಬಸ್ಸುಗಳು ಆಚರಣೆಯಾಗುವ ಸೇವೆಗಳಿಗೆ ವ್ಯಾಪ್ತಿಗೆ ಮಾತ್ರ ಮಾನ್ಯ ಮಾಡಲಾಗಿರುತ್ತದೆ.) | | | | |
| ಕಪ್ಪು & ಕೆಂಪು ಹಲಗೆ ಪಾಸುದಾರರು, ಹಿರಿಯ ನಾಗರೀಕರ ಪಾಸುದಾರರು ಎ.ಸಿ. ಸುವರ್ಣ ಸೇವೆಗಳಲ್ಲಿ ಪ್ರಯಾಣಿಸಲು ಪ್ರತಿ ಸುತ್ತುವಳಿಗಳಿಗೆ ರೂ. 20/- ರ ರಿಯಾಯಿತಿ ದರದ ಟಿಕೆಟ್ ಪಡೆದು ಪ್ರಯಾಣಿಸಬಹುದಾಗಿರುತ್ತದೆ. ( ಕಪ್ಪು ಹಲಗೆ ಪಾಸುದಾರರು, ಈ ಸೌಲಭ್ಯವನ್ನು ಕಪ್ಪು ಹಲಗೆ ಬಸ್ಸುಗಳು ಆಚರಣೆಯಾಗುವ ಸೇವೆಗಳಿಗೆ ವ್ಯಾಪ್ತಿಗೆ ಮಾತ್ರ ಮಾನ್ಯ ಮಾಡಲಾಗಿರುತ್ತದೆ.) | | | | |

## <u>ಬಿ. 1. ಸಾಮಾಜಿಕ ಹೊಣೆಗಾರಿಕೆಗಳು :</u>

ಅ) ವಿಶೇಷ ವರ್ಗದ ಪ್ರಯಾಣಿಕರಿಗೆ ಆಸನಗಳ ಮೀಸಲಾತಿ ಉದಾ: ಮಹಿಳೆಯರಿಗೆ, ಹಿರಿಯ ನಾಗರೀಕರಿಗೆ, ಅಂಗವಿಕಲರಿಗೆ.

ಆ) ಎಲ್ಲಾ ವರ್ಗದ ಪ್ರಯಾಣಿಕರಿಗೆ ವಿಮಾ ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿ ಸೌಲಭ್ಯ

ಇ) ಹಿರಿಯ ನಾಗರೀಕರಿಗೆ ಚೀಟಿ ಹಾಗೂ ಮಾಸಿಕ ಪಾಸುಗಳಲ್ಲಿ ರಿಯಾಯ್ತಿ ದರದ ಪ್ರಯಾಣ ಸೌಲಭ್ಯ

ಈ) ವಿದ್ಯಾಗಳಿಗೆ, ಪೊಲೀಸ್ & ಅಗ್ನಿಶಾಮಕದಳದ ಸಿಬ್ಬಂದಿಗೆ, ಅಂಗವಿಕಲರಿಗೆ, ಅಂಧರಿಗೆ, ಹುತಾತ್ಮ ಯೋಧರ ಅವಲಂಬಿತರಿಗೆ, ಸ್ವಾತಂತ್ರ್ಯ ಯೋಧರು/ಅವರ ವಿಧವಾ ಪತ್ನಿಯರಿಗೆ ರಿಯಾಯಿತಿ/ಉಚಿತ ಪ್ರಯಾಣ ಸೌಲಭ್ಯ

**ಅ) ವಿಶೇಷ ವರ್ಗದ ಪ್ರಯಾಣಿಕರಿಗೆ ಆಸನಗಳ ಮೀಸಲಾತಿ :**

ಮಹಿಳೆಯರು, ವಯಸ್ಸಾದವರು ಮತ್ತು ಅಂಗವಿಕಲರ ಅಸಹಜತೆಯನ್ನು ಗಮನದಲ್ಲಿರಿಸಿ ಸಂಸ್ಥೆಯು ಕೆಲವು ಸಂಖ್ಯೆಯ ಆಸನಗಳನ್ನು ತನ್ನ ಎಲ್ಲಾ ಸಾಮಾನ್ಯ ಬಸ್ಸುಗಳಲ್ಲಿ ಈ ವಿಶೇಷ ವರ್ಗದ ಪ್ರಯಾಣಿಕರಿಗೆಂದು ಮೀಸಲಿರಿಸಿರುತ್ತದೆ. ವರ್ಗವಾರು ಮೀಸಲಾತಿಯ ವಿವರಗಳು ಈ ಕೆಳಕಂಡಂತಿವೆ.

| ವರ್ಗ | ಮೀಸಲಿರಿಸಿರುವ ಆಸನಗಳು |
|---|---|
| ಮಹಿಳೆಯರಿಗೆ | ಒಟ್ಟಾರೆ 16 ಆಸನಗಳನ್ನು ಬಸ್ಸಿನ ಮುಂಭಾಗದಲ್ಲಿ ಮೀಸಲಿರಿಸಿದ್ದು, ಈ ಆಸನಗಳ ಮೇಲ್ಭಾಗದಲ್ಲಿ ಖಮಹಿಳೆಯರಿಗೆ ಮಾತ್ರಖ ಎಂಬ ಫಲಕಗಳನ್ನು ಪ್ರದರ್ಶಿಸಲಾಗಿದೆ. |
| ಹಿರಿಯ ನಾಗರೀಕರಗೆ | ಎಲ್ಲಾ ಸಾಮಾನ್ಯ ಬಸ್ಸುಗಳಲ್ಲಿ 6 ಆಸನಗಳನ್ನು ಹಿರಿಯ ನಾಗರೀಕರಿಗೆ ಮೀಸಲಿರಿಸಿದ್ದು, ಮಹಿಳೆಯರ 16 ಆಸನಗಳಲ್ಲಿ 2 ಆಸನಗಳನ್ನು ಮಹಿಳಾ ಹಿರಿಯ ನಾಗರೀಕರಿಗೆಂದು ಮಧ್ಯ ಬಾಗಿಲಿನ ಹತ್ತಿರಕ್ಕೆ ಮತ್ತೆರಡು ಆಸನಗಳನ್ನು ಪುರುಷ ಹಿರಿಯ ನಾಗರೀಕರಿಗೆಂದು ಮೀಸಲಿರಿಸಲಾಗಿದೆ. |
| ಅಂಗವಿಕಲರಿಗೆ | ಸಾಮಾನ್ಯ ಬಸ್ಸಿನ ಮುಂದಿನ ಬಾಗಿಲ ಬಳಿ ಒಂದು ಆಸನ ಮತ್ತು ಹಿಂದಿನ ಬಾಗಿಲ ಬಳಿ ಒಂದು ಆಸನ ಒಟ್ಟಾರೆ 2 ಆಸನಗಳನ್ನು ಹಾಗೂ ವಜ್ರ ಸೇವೆಗಳಲ್ಲಿ ಮಧ್ಯಬಾಗಿಲ ಬಳಿಯಿರುವ ಎರಡು ಆಸನಗಳನ್ನು ಅಂಗವಿಕಲರಿಗೆ ಮೀಸಲಿರಿಸಲಾಗಿರುತ್ತದೆ ಹಾಗೂ ಖಅಂಗವಿಕಲರಿಗೆಖ ಎಂಬ ಫಲಕಗಳಲ್ಲಿ ಪ್ರದರ್ಶಿಸಲಾಗಿರುತ್ತದೆ. |

D) **ವಿಮಾ ಸೌಲಭ್ಯ ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ :**

ವಿವಿಧ ವರ್ಗ ಪ್ರಯಾಣಿಕರಿಗೆ ಜಾರಿಯಲ್ಲಿರುವ ವಿಮಾ ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿ ಸೌಲಭ್ಯದ ವಿವರಗಳು ಈ ಕೆಳಕಂಡಂತಿವೆ.

| | |
|---|---|
| 1. ಮಾಸಿಕ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ | ಬೆಂಮಸಾಸಂಸ್ಥೆಯು ಮಾಸಿಕ ಪಾಸುದಾರರಿಗೆ ವಿಶೇಷ ಸೌಲಭ್ಯ ನೀಡುವ ಸಲುವಾಗಿ ದ್ವಿಪ್ರಯೋಜನ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಯು ಕೆಳಕಂಡ ಸೌಲಭ್ಯಗಳನ್ನು ಒಳಗೊಂಡಿದೆ.<br>**1) 24 ತಾಸುಗಳ ಅಪಾತ ವಿಮಾ ರಕ್ಷೆ : ಚಾಲ್ತಿಯಲ್ಲಿರುವ ಪಾಸು ಹೊಂದಿದವರು ಸಮಯದ ನಿರ್ಬಂಧವಿಲ್ಲದೆ/ಯಾವುದೇ ಸ್ಥಳದಲ್ಲಿ ಅಪಾತದಿಂದ ಮರಣ ಹೊಂದಿದ್ದಲ್ಲಿ ಅಥವಾ ಸಂಪೂರ್ಣ ಅಂಗಹೀನತೆ ಉಂಟಾದಲ್ಲಿ ರೂ.2.00 ಲಕ್ಷ ವಿಮಾ ಪರಿಹಾರ.**<br>**2)** ವೈದ್ಯಕೀಯ ವೆಚ್ಚ ಮರುಪಾವತಿ: ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಟ ರೂ. 30,000/- ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು. |
| **2. ಗೋಲ್ಡ್ ಮಾಸಿಕ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ :** | 1) ಚಾಲ್ತಿಯಲ್ಲಿರುವ ಪಾಸು ಹೊಂದಿರುವವರು ಯಾವುದೇ ವಿಧವಾದ ವಾಹನ ಅಪಾತದಲ್ಲಿ ಮೃತಪಟ್ಟಲ್ಲಿ ಅಥವಾ ಶಾಶ್ವತ ಅಂಗಹೀನತೆ ಉಂಟಾದಲ್ಲಿ ರೂ.5 ಲಕ್ಷಗಳವರೆಗಿನ ಸ್ವಯಂಚಾಲಿತ ಅಪಾತ ವಿಮಾ ಸೌಲಭ್ಯ.<br>2) ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ |

| | |
|---|---|
| | ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಟ ರೂ.50,000/- ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು. |
| **3. ವಾಯುವಜ್ರಗೋಲ್ಡ್ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ :** | 1) ಚಾಲ್ತಿಯಲ್ಲಿರುವ ಪಾಸು ಹೊಂದಿರುವವರು ಯಾವುದೇ ವಿಧವಾದ ವಾಹನ ಅಪಾತದಲ್ಲಿ ಮೃತಪಟ್ಟಲ್ಲಿ ಅಥವಾ ಶಾಶ್ವತ ಅಂಗಹೀನತೆ ಉಂಟಾದಲ್ಲಿ ರೂ.10.00 ಲಕ್ಷಗಳವರೆಗಿನ ಸ್ವಯಂಚಾಲಿತ ಅಪಾತ ವಿಮಾ ಸೌಲಭ್ಯ.<br>2) ಚಾಲ್ತಿಯಲ್ಲಿರುವ ಪಾಸು ಹೊಂದಿದವರು ವಾಹನ ಅಪಾತದಿಂದ ಗಾಯಗೊಂಡು ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಪಡೆದಿದ್ದಲ್ಲಿ, ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಪರಿಶೀಲಿಸಿ ಗರಿಷ್ಟ ರೂ.50,000/- ಗಳವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿಯನ್ನು ನೀಡಲಾಗುವುದು. |
| **3. ವಿದ್ಯಾರಿಯಾಯ್ತಿ ಪಾಸುದಾರರಿಗೆ ದ್ವಿಪ್ರಯೋಜನ ಯೋಜನೆ :** | ವಿದ್ಯಾಪಾಸುದಾರರ ಅನುಕೂಲಕ್ಕಾಗಿ ಬೆಂಮಸಾಸಂಸ್ಥೆಯು ಖದ್ವಿಪ್ರಯೋಜನ ಯೋಜನೆಖಯನ್ನು 2004 ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ. ಬೆಂಮಸಾಸಂಸ್ಥೆಯ ಚಾಲ್ತಿಯಲ್ಲಿರುವ ವಿದ್ಯಾಪಾಸನ್ನು ಹೊಂದಿರುವ ವಿದ್ಯಾಗಳಿಗೆ ಈ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ.<br>1. ಚಾಲ್ತಿಯಲ್ಲಿರುವ ವಿದ್ಯಾರಿಯಾಯ್ತಿ ಪಾಸನ್ನು ಹೊಂದಿರುವ ವಿದ್ಯಾಯು ವಾಹನ ಅಪಾತದಲ್ಲಿ ಮರಣ ಹೊಂದಿದಲ್ಲಿ ಅಥವಾ ಸಂಪೂರ್ಣ ಅಂಗವಿಕಲರಾದಲ್ಲಿ ಅವರ ಪೋಷಕರಿಗೆ/ನಾಮನಿರ್ದೇಶನ ಹೊಂದಿದವರಿಗೆ ರೂ.1.00 ಲಕ್ಷ ವಿಮಾ ಪರಿಹಾರವನ್ನು ನೀಡಲಾಗುವುದು.<br>2. ಚಾಲ್ತಿಯಲ್ಲಿರುವ ವಿದ್ಯಾರಿಯಾಯ್ತಿ ಪಾಸುದಾರನು ಯಾವುದೇ ವಾಹನ ಅಪಾತದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆದಿದ್ದಲ್ಲಿ ರೂ.10,000/-ದವರೆಗೆ ವೈದ್ಯಕೀಯ ವೆಚ್ಚದ ಮರುಪಾವತಿ ಸೌಲಭ್ಯ. |
| 4. ಚೀಟಿ/ದಿನದ ಪಾಸುಗಳನ್ನು ಹೊಂದಿರುವ ಪ್ರಯಾಣಿಕರಿಗೆ ದ್ವಿಪ್ರಯೋಜನ ಯೋಜನೆ | **1. ಅಪಾತ ಪರಿಹಾರ/ಎಕ್ಸ್ಗ್ರೇಷಿಯಾ ಪ್ರಯೋಜನ: ಚಾಲ್ತಿಯಲ್ಲಿರುವ ಸಂಸ್ಥೆಯ ಟಿಕೇಟು/ದಿನದ ಪಾಸನ್ನು ಹೊಂದಿ ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಾತವಾಗಿ ಮರಣಿಸಿದಲ್ಲಿ/ಸಂಪೂರ್ಣ ಅಂಗವಿಕಲರಾದಲ್ಲಿ ರೂ.1.00 ಲಕ್ಷ ಅಪಾತ ಪರಿಹಾರ/ಎಕ್ಸ್ಗ್ರೇಷಿಯಾ ಪ್ರಯೋಜನ ನೀಡಲಾಗುವುದು.** |

| | |
|---|---|
| **(ದಿನಾಂಕ 1.12.2005ರಿಂದ):** | **2. ವೈದ್ಯಕೀಯ ವೆಚ್ಚ ಮರುಪಾವತಿ: ಚಾಲ್ತಿಯಲ್ಲಿರುವ ಸಂಸ್ಥೆಯ ಟಿಕೇಟು/ದಿನದ ಪಾಸನ್ನು ಹೊಂದಿ ಸಂಸ್ಥೆಯ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಾತವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ ಅಂತಹವರಿಗೆ ರೂ.20,000/- ದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗುವುದು.** |

| | |
|---|---|
| 5. ಸಾಂದರ್ಭಿಕ ಒಪ್ಪಂದ /ಗುತ್ತಿಗೆ ಆಧಾರದ ಪ್ರಯಾಣಿಕರ ದ್ವಿಪ್ರಯೋಜನ ಯೋಜನೆ **(ದಿ. 26/2/2006 ರಿಂದ)** | **1. ಅಪಾತಪರಿಹಾರ/ಎಕ್ಸ್ಗ್ರೇಷಿಯಾ ಪ್ರಯೋಜನ: ಸಂಸ್ಥೆಯ ಸಾಂದರ್ಭಿಕ ಒಪ್ಪಂದ/ಗುತ್ತಿಗೆ ಆಧಾರದ ಮೇಲೆ ಆಚರಣೆಯಾಗುವ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಾತವಾಗಿ ಮರಣಿಸಿದಲ್ಲಿ/ಸಂಪೂರ್ಣ ಅಂಗವಿಕಲರಾದಲ್ಲಿ ರೂ.1.00 ಲಕ್ಷ ಅಪಾತ ಪರಿಹಾರ/ಎಕ್ಸ್ಗ್ರೇಷಿಯಾ ಪ್ರಯೋಜನ ನೀಡಲಾಗುವುದು.**<br>**2.ವೈದ್ಯಕೀಯ ವೆಚ್ಚ ಮರುಪಾವತಿ: ಸಂಸ್ಥೆಯ ಸಾಂದರ್ಭಿಕ ಒಪ್ಪಂದ/ಗುತ್ತಿಗೆ ಆಧಾರದ ಮೇಲೆ ಆಚರಣೆಯಾಗುವ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾಗ ಅಪಾತವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಲ್ಲಿ ಅಂತಹವರಿಗೆ ರೂ.20,000/- ದವರೆಗೆ ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗುವುದು.** |

- **<u>ಹಿರಿಯ ನಾಗರೀಕರಿಗೆ ರಿಯಾಯ್ತಿ ದರದ ಪ್ರಯಾಣ ಸೌಲಭ್ಯ (ಟಿಕೇಟುಗಳು & ಪಾಸುಗಳ ದರದಲ್ಲಿ):</u>**

C) ಸರ್ಕಾರದ ನಿರ್ದೇಶನದಂತೆ 60 ವರ್ಷ ಪೂರೈಸಿದ ಹಿರಿಯ ನಾಗರೀಕರಿಗೆ ಸಂಸ್ಥೆಯ ಎಲ್ಲಾ ಸೇವೆಗಳ (ವಾಯುವಜ್ರ & ಬೆಂಗಳೂರು ರೌಂಡ್ಸ್ ಸೇವೆ) ಟಿಕೇಟ್ ದರದಲ್ಲಿ ಶೇ.25 ರಷ್ಟು ರಿಯಾಯ್ತಿಯನ್ನು ನೀಡಲಾಗುತ್ತಿದೆ.

D) ಸುವರ್ಣ ಕರ್ನಾಟಕ ವರ್ಷಾಚರಣೆಯ ಸುಸಂದರ್ಭದಲ್ಲಿ 60 ವರ್ಷ ಪೂರೈಸಿದ ಹಿರಿಯ ನಾಗರೀಕರಿಗೆ (ಡಿಸೆಂಬರ್ 2006 ರಿಂದ) ಸಾಮಾನ್ಯ ಮಾಸಿಕ ಪಾಸುಗಳ ದರದಲ್ಲಿ ಶೇ.10 ರಷ್ಟು ರಿಯಾಯ್ತಿ ಸೌಲಭ್ಯವನ್ನು ವಿಸ್ತರಿಸಲಾಗಿರುತ್ತದೆ. ಈ ಯೋಜನೆ ಬೆಂಮಸಾಸಂಸ್ಥೆಯ ನಿರ್ಧಾರವಾಗಿರುತ್ತದೆ.

ಸೂಚನೆ : ವಯಸ್ಸಿನ ದೃಢೀಕರಣಕ್ಕೆ ಮತದಾರರ ಗುರುತಿನ ಚೀಟಿ, ಚಾಲನಾ ಪರವಾನಗಿ, ಪಾನ್ಕಾರ್ಡ್, ಕ.ರಾ.ರ.ಸಾ.ನಿಗಮದಿಂದ ವಿತರಿಸಲಾಗುವ ಹಿರಿಯ ನಾಗರೀಕರ ಗುರುತಿನ ಚೀಟಿ ಇತ್ಯಾದಿಗಳಲ್ಲಿ ಒಂದನ್ನು ಪ್ರಸ್ತುತಪಡಿಸಬೇಕಿರುತ್ತದೆ.

## ವಿದ್ಯಾಗಳಿಗೆ, ಪೊಲೀಸ್ & ಅಗ್ನಿಶಾಮಕ ದಳ, ಅಂಗವಿಕಲರು & ಅಂಧರು, ಹುತಾತ್ಮಯೋಧರ ಅವಲಂಬಿತರು, ಸ್ವಾತಂತ್ರ್ಯ ಹೋರಾಟಗಾರರಿಗೆ ರಿಯಾಯ್ತಿ ದರದ ಪ್ರಯಾಣ ಸೌಲಭ್ಯ :

- ವಿದ್ಯಾಪಾಸುಗಳು : 1 ನೇ ತರಗತಿಯಿಂದ ಸ್ನಾತಕೋತರ ಪದವಿವರೆಗೆ ಸರ್ಕಾರದಿಂದ ಮಾನ್ಯತೆ ಪಡೆದ ಎಲ್ಲಾ ಶಾಲೆ/ಕಾಲೇಜು/ವಿಶ್ವವಿದ್ಯಾನಿಲಯಗಳ ವಿದ್ಯಾಗಳಿಗೆ ರಿಯಾಯ್ತಿ ದರದಲ್ಲಿ ಪಾಸು ವಿತರಿಸಲಾಗುತ್ತದೆ. ವಿದ್ಯಾಸಂಸ್ಥೆಗೆ ಪಾವತಿಸಿರುವ ಶುಲ್ಕ ರಸೀದಿ (ಶುಲ್ಕ ಇಲ್ಲವಾದಲ್ಲಿ ಹೊರತುಪಡಿಸಿರುವ ದೃಡೀಕರಣ ಪತ್ರ) ಇತ್ತೀಚಿನ ಒಂದು ಭಾವಚಿತ್ರ, ನಿಗದಿತ ಪಾಸಿನ ಶುಲ್ಕದೊಂದಿಗೆ ಭರ್ತಿಗೊಳಿಸಿ, ದೃಢೀಕರಿಸಿ ಅರ್ಜಿಯನ್ನು ಪ್ರಸ್ತುತಪಡಿಸಿ ಈ ರಿಯಾಯ್ತಿ ಪಾಸಿನ ಸೌಲಭ್ಯವನ್ನು ಪಡೆಯಬಹುದಾಗಿರುತ್ತದೆ. ಬೆಂಮಸಾಸಂಸ್ಥೆಯು ಒಂದು ಮಾರ್ಗದಲ್ಲಿ 50 ಕಿ.ಮೀ ಪ್ರಯಾಣ ಸೌಲಭ್ಯದ ವ್ಯವಸ್ಥೆಯಿರುತ್ತದೆ.
- ಪೊಲೀಸ್ ಡ್ಯೂಟಿ ಪಾಸು : ಬೆಂಗಳೂರು ನಗರದ ಆಚರಣಾ ವ್ಯಾಪ್ತಿಯಲ್ಲಿರುವ ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುವ ದರ್ಜೆ-3 & ದರ್ಜೆ-4 ರ ಪೊಲೀಸ್ ಸಿಬ್ಬಂದಿಗಳಿಗೆ ರಿಯಾಯಿತಿ ದರದಲ್ಲಿ ಪಾಸು ವಿತರಿಸಲಾಗುತ್ತಿದೆ. ಈ ಪಾಸುಗಳನ್ನು ವ್ಯಕ್ತಿ ನಿರ್ದಿಷ್ಟವಾಗಿ 6 ತಿಂಗಳ ಅವಧಿಗೆ ವಿತರಿಸಲಾಗುತ್ತಿದೆ. ಎಲ್ಲಾ ಹವಾನಿಯಂತ್ರಣರಹಿತ ಬಸ್ಸುಗಳಲ್ಲಿ ಪ್ರಯಾಣಿಸಬಹುದಾಗಿರುತ್ತದೆ.
- ವಿವಿಧ ಅಂಗವೈಕಲ್ಯತೆಯುಳ್ಳವರಿಗೆ ರಿಯಾಯ್ತಿ ಪಾಸು : ಬೆಂಮಸಾಸಂಸ್ಥೆಯು ಅಂಗವಿಕಲರ ಕಲ್ಯಾಣ ಇಲಾಖೆಯ ಶಿಫಾರಸ್ಸಿನೊಂದಿಗೆ ಕರಾರಸಾನಿಗಮದ ವತಿಯಿಂದ ವಿತರಿಸಿರುವ ಅಂಗವಿಕಲರ ಹಾಗೂ ಅಂಧರ ಪಾಸು ಹೊಂದಿರುವವರಿಗೆ ಹೆಚ್ಚಿನ ಪ್ರಯಾಣ ಸೌಕರ್ಯವನ್ನು ವಿಸ್ತರಿಸಿರುತ್ತದೆ. ಈ ರಿಯಾಯ್ತಿ ಪಾಸುದಾರರು ಒಂದು ಮಾರ್ಗದಲ್ಲಿ 100 ಕಿ.ಮೀ ವ್ಯಾಪ್ತಿಯಲ್ಲಿ ರಾಜ್ಯ ಎಲ್ಲಾ ಸಾರಿಗೆಯ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶವಿರುತ್ತದೆ.
- ಪತ್ರಕರ್ತರ ಬಸ್ ಪಾಸು : ಬೆಂಮಸಾಸಂಸ್ಥೆಯು ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಕರ್ತವ್ಯ ನಿರ್ವಹಿಸುವ ಪತ್ರಕರ್ತರಿಗೆ ಕನಿಷ್ಟ ದರದೊಂದಿಗೆ ಪಾಸು ವಿತರಿಸುತ್ತಿರುತ್ತದೆ. ವಾರ್ತಾ & ಪ್ರಚಾರ ಇಲಾಖೆಯಿಂದ ಮಾನ್ಯತೆ ಕಾರ್ಡ್ ಪಡೆದಿದ್ದು, ಟಿವಿ/ನ್ಯೂಸ್ ಪೇಪರ್ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಕರ್ತರು ಈ ಪಾಸು ಸೌಲಭ್ಯವನ್ನು ಪಡೆಯಬಹುದಾಗಿದೆ.
- ಹುತಾತ್ಮ ಯೋಧರ ಅವಲಂಬಿತರ ಪಾಸು : ತಮ್ಮ ಸೇವಾವಧಿಯಲ್ಲಿ ರಾಷ್ಟ್ರ ರಕ್ಷಣೆಗೆ ತಮ್ಮ ಪ್ರಾಣವನ್ನು ಅರ್ಪಿಸಿದ ವೀರ ಯೋಧರ ಅವಲಂಬಿತರಿಗೆ (ಪೋಷಕರು, ಹೆಂಡತಿ ಮತ್ತು ಮಕ್ಕಳು) ಸಂಸ್ಥೆಯು ಉಚಿತ ಪಾಸುಗಳನ್ನು 2010 ರಿಂದ ವಿತರಿಸುತ್ತಿರುತ್ತದೆ. ಈ ಪಾಸುದಾರರು ಸಂಸ್ಥೆಯ ಎಲ್ಲಾ ಹವಾನಿಯಂತ್ರಣರಹಿತ

ಸೇವೆಗಳಲ್ಲಿ ಪ್ರಯಾಣಿಸಬಹುದಾಗಿರುತ್ತದೆ. ಜೂನ್ 2012 ರಿಂದ ಈ ಪಾಸುಗಳನ್ನು ಕ.ರಾ.ರ.ಸಾ.ನಿಗಮದಿಂದ ವಿತರಿಸಲಾಗುತ್ತಿದ್ದು, ಬೆಂ.ಮ.ಸಾ.ಸಂಸ್ಥೆಯ ಬಸ್ಸುಗಳಲ್ಲಿ ಮಾನ್ಯ ಮಾಡಲಾಗುತ್ತಿದೆ.

**ಶುದ್ಧ ಪರಿಸರ ನಿರ್ಮಾಣಕ್ಕೆ ಸಂಸ್ಥೆಯ ಕೊಡುಗೆ :**

ಹೆಚ್ಚಿನ ವಾಹನ ಬಲದೊಂದಿಗೆ ಸಾರ್ವಜನಿಕ ಸಾರಿಗೆ ಸೌಲಭ್ಯ ಒದಗಿಸುವ ಜವಾಬ್ದಾರಿಯುಳ್ಳ ಏಕೈಕ ಸಾರಿಗೆ ಸಂಸ್ಥೆಯಾಗಿರುವ ಬೆಂಮಸಾಸಂಸ್ಥೆಯು ಶುದ್ಧ ಹಾಗೂ ಮಾಲಿನ್ಯರಹಿತ ಪರಿಸರ ನಿರ್ಮಾಣಗೊಸ್ಕರ ಇತ್ತೀಚಿಗೆ ಪರಿಚಯವಾಗಿರುವ ಮಾಹಿತಿ ತಂತ್ರಜ್ಞಾನ ಹಾಗೂ ಬಸ್ಸುಗಳ ನಿರ್ವಹಣೆಯ ತಂತ್ರಗಳನ್ನು ಅಳವಡಿಸಿಕೊಂಡು ನಗರದ ಮಾಲಿನ್ಯ ತಡೆಯಲು ನಿರಂತರ ಶ್ರಮಿಸುತ್ತಿದೆ ಹಾಗೂ ಈ ಕೆಳಕಂಡ ಕ್ರಮಗಳನ್ನು ಅಳವಡಿಸಿಕೊಂಡಿರುತ್ತದೆ.

ಅ) ಉತ್ತಮ ದರ್ಜೆಯ ಬಸ್ಸು ನಿರ್ವಹಣೆ : ಉತ್ತಮ ದಕ್ಷ ಇಂಧನ ಬಳಕೆಯ ವಾಹನಗಳೊಂದಿಗೆ ಮಾಲಿನ್ಯ ಪ್ರಮಾಣ ಕಡಿಮೆ ಇರುವ ಬಸ್ಸುಗಳ ಬಳಕೆ ಹಾಗೂ ಬಯೋ-ಇಂಧನವನ್ನು ಬಳಸುವುದು.

ಆ) ಕಡಿಮೆ ಪ್ರಮಾಣದ ಗಂಧಕ ಮಿಶ್ರಿತ ಇಂಧನವನ್ನು ವಾಹನಗಳಿಗೆ ಬಳಸುವುದು.

ಇ) ಇತರ ರಸ್ತೆ ಸಾರಿಗೆ ಸಂಸ್ಥೆಗಳಿಗೆ ಹೋಲಿಸಿದಲ್ಲಿ ಕಡಿಮೆ ವಯಸ್ಸಿನ ವಾಹನಗಳನ್ನು ಹೊಂದಿರುವುದು.

ಈ) ಯೂರೋ-2 ಮತ್ತು ಯೂರೋ-3 ಮಾದರಿಯ ಮಾಲಿನ್ಯ ನಿಯಂತ್ರಣ ಇಂಜಿನ್ಗಳ ಅಳವಡಿಸುವಿಕೆ.

ಉ) ತನ್ನ ವಾಹನ ಬಲದಲ್ಲಿನ ಎಲ್ಲಾ ವಾಹನಗಳು ಗುಣಮಟ್ಟದ ಮಾಲಿನ್ಯ ತಪಾಸಣೆಗೊಳಪಟ್ಟು ನಿಗದಿತ ಹೊಗೆ ಉಗುಳುವಿಕೆಯ ಪ್ರಮಾಣವನ್ನು ಹೊಂದಿರುತ್ತದೆ.

ಋ) ಬಯೋ-ಇಂಧನಗಳಾದ ಹೊಂಗೆ ಎಣ್ಣೆ ಇತ್ಯಾದಿಗಳ ಬಳಕೆ ನಿರಂತರವಾಗಿರುತ್ತದೆ.

## 2. ಬೆಂಮಸಾಸಂಸ್ಥೆಯು ತನ್ನ ಪ್ರಯಾಣಿಕರಿಗೆ ಉತ್ತಮ ಸೇವೆ ನೀಡಲು ಒಡಂಬಡಿಕೆಗಳು:

- ತನ್ನ ಪ್ರಯಾಣಿಕರಿಗೆ ದಕ್ಷ, ಸುರಕ್ಷಿತ, ವಿಶ್ವಾಸನೀಯ, ಆರಾಮದಾಯಕ ಮತ್ತು ಕೈಗೆಟಕುವ ದರದ ಸಾರಿಗೆ ಸೌಲಭ್ಯವನ್ನು ಎಲ್ಲಾ ವರ್ಗದ ಜನತೆಗೆ ಒದಗಿಸುವುದು.
- ಸಾರ್ವಜನಿಕ ಸ್ನೇಹಿ, ತಕ್ಷಣ ಪ್ರತಿಕ್ರಿಯಿಸುವ ಮತ್ತು ಸೌಜನ್ಯಯುತ ಸಾರಿಗೆ ಸೌಲಭ್ಯವನ್ನು ಒದಗಿಸುವುದು.
- ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಹೊಸಹೊಸ ಯೋಜನೆಗಳನ್ನು ಜಾರಿಗೆ ತರುವುದು.
- ಹಿರಿಯ ನಾಗರೀಕರಿಗೆ, ಅಂಗವಿಕಲರಿಗೆ ಮತ್ತು ಮಹಿಳೆಯರಿಗೆ ಮೀಸಲು ಆಸನಗಳ ವ್ಯವಸ್ಥೆಯನ್ನು ಸಂಪೂರ್ಣವಾಗಿ ಜಾರಿಗೆ ತರುವುದು.

- ಸಂಸ್ಥೆಯ ಇತ್ತೀಚಿನ ಸೇವೆಗಳ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರಿಗೆ ಪ್ರಯಾಣಿಕ ಸ್ನೇಹಿ ವ್ಯವಸ್ಥೆಯ ಮೂಲಕ ತಿಳಿಸುವುದು.
- ಸ್ವಚ್ಚ ಹಾಗೂ ಆರೋಗ್ಯಕರ ಸ್ಥಿತಿಯ ಬಸ್ಸುಗಳನ್ನು ಆಚರಿಸುವುದು.
- ಬಸ್ಸುಗಳಲ್ಲಿ ಸರಳ ಹಾಗೂ ನಿಚ್ಚಳ ಮಾರ್ಗ ಫಲಕಗಳನ್ನು ಪ್ರದರ್ಶಿಸುವುದು.
- ಪ್ರಯಾಣಿಕ ಸ್ನೇಹಿ ಆವಿಷ್ಕಾರಗಳಾದ ರಿಯಾಯ್ತಿ ದರದ ವಿದ್ಯಾರ್ಥಿಯಾಯ್ತಿ ಪಾಸು, ಹಿರಿಯ ನಾಗರೀಕರ ಪಾಸು, ಪ್ರಯಾಣಿಕರ ಜನಪ್ರಿಯತೆಯ ದಿನದ & ಮಾಸಿಕ ಪಾಸುಗಳ ವಿತರಣೆಯನ್ನು ಮುಂದುವರಿಸುವುದು.
- ಸಾಮಾಜಿಕ ಪಿಡುಗುಗಳಾದ ಪೋಲೀಯೋ, ಏಡ್ಸ್ ಮುಂತಾದವುಗಳನ್ನು ಕಿತ್ತೆಸೆಯಲು ತನ್ನ ಕೊಡುಗೆಯನ್ನು ಸದಾ ನೀಡುತ್ತಾ ಇರುವುದು.

- ಸಾರ್ವಜನಿಕ ಬೇಡಿಕೆಯನ್ವಯ ತನ್ನ ಸೇವೆಗಳನ್ನು ಪರಿಶೀಲಿಸುವುದು ಮತ್ತು ಪರಿಷ್ಕರಿಸುವುದು.
- ಸಾರ್ವಜನಿಕರ ಸಂಪೂರ್ಣ ಸಂತೃಪ್ತಿಗಾಗಿ ತನ್ನ ಸೇವೆಗಳನ್ನು ಉತ್ತಮಪಡಿಸಲು ಸದಾಕಾರ್ಯಮಗ್ನವಾಗಿರುವುದು.

**3. ಉತ್ತಮ ಸೇವೆಯನ್ನು ಒದಗಿಸಲು ನೀವು ಸಂಸ್ಥೆಗೆ ಸಹಾಯ ಮಾಡುವ ವಿಧಾನ:**

C. ಅಧಿಕೃತ ಟಿಕೇಟ್ ಇಲ್ಲದೆ ಪ್ರಯಾಣಿಸಬಾರದು, ಟಿಕೇಟ್ ರಹಿತ ಪ್ರಯಾಣಕ್ಕೆ ಟಿಕೇಟ್ ದರದ 10 ಪಟ್ಟು ದಂಡ ವಿಧಿಸಲಾಗುವುದು.

D. ಟಿಕೇಟ್ ರಹಿತ ಪ್ರಯಾಣದ ಬಗ್ಗೆ/ದುರುಪಯೋಗದ ಬಗ್ಗೆ ಬಸ್ ನಿಲ್ದಾಣ, ಕೇಂದ್ರ ಕಛೇರಿ, ಟಕಗಳ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವುದು.

E. ಬಸ್ ನಿಲುಗಡೆಗಳಲ್ಲಿ ಕ್ಯೂ ಪದ್ದತಿ ಅನುಸರಿಸುವುದು.

F. ಬಸ್ಸಿಗೆ ಹತ್ತುವ ಮುಂದೆ ಇಳಿಯುವ ಪ್ರಯಾಣಿಕರಿಗೆ ಅವಕಾಶ ಮಾಡಿಕೊಡಿ.

G. ಬಸ್ಸಿಗೆ ಹತ್ತುವಾಗ ಮತ್ತು ಇಳಿಯುವಾಗ ಅಂಗವಿಕಲರಿಗೆ ಮಹಿಳೆಯರು, ಮಕ್ಕಳು ಮತ್ತು ವೃದ್ದರಿಗೆ ಆದ್ಯತೆಕೊಡಿ, ವಿಶೇಷವಾಗಿ ಮೀಸಲಿರಿಸಿದ ಆಸನಗಳಲ್ಲಿ ಕುಳಿತಿದ್ದಲ್ಲಿ ದಯವಿಟ್ಟು ಅವರು ಬಂದಾಗ ತೆರವು ಮಾಡಿ.

H. ಫುಟ್ಬೋರ್ಡ್ ಮೇಲೆ ನಿಂತು ಪ್ರಯಾಣಿಸುವುದು ಅಪಾಯಕಾರಿ/ಪ್ರಾಣಾಂತಿಕ ಹಾಗೂ ಕಾನೂನು ಪ್ರಕಾರ ಅಪರಾಧ ದಯವಿಟ್ಟು ಫುಟ್ ಬೋರ್ಡ್ ಮೇಲೆ ನಿಂತು ಪ್ರಯಾಣಿಸಬೇಡಿ, ಇತರರಿಗೂ ಹತ್ತಲು ಅವಕಾಶ ಕೊಡಬೇಡಿ.

I. ಸಿಗ್ನಲ್ ಗಳಲ್ಲಿ ಅಥವಾ ಬಸ್ಸು ಚಲಿಸುವಾಗ ಬಸ್ಸನ್ನು ಹತ್ತಬೇಡಿ.

J. ಬಸ್ಸುಗಳನ್ನು ಹಾಗೂ ಬಸ್ ನಿಲ್ದಾಣಗಳನ್ನು ಸ್ವಚ್ಛವಾಗಿಡಲು ಸಹಕರಿಸಿ.

**K.** ಧೂಮಪಾನ ನಿಮ್ಮ ಹಾಗೂ ಇತರರ ಆರೋಗ್ಯವನ್ನು ಕೆಡಿಸುತ್ತದೆ, ಬಸ್ಸುಗಳಲ್ಲಿ/ಬಸ್ ನಿಲ್ದಾಣಗಳಲ್ಲಿ ಧೂಮಪಾನ ಮಾಡಬೇಡಿ.

